ವಿಜಯಪುರ | ಸಂಪುಟ 02 | ಸಂಚಿಕೆ 251 | ಪುಟ 4 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಶನಿವಾರ, ನವೆಂಬರ್ 30, 2024

"ವಿಜಯಪುರ ನಗರದ ಅಭಿವೃದ್ಧಿಯ ಜೊತೆಗೆ ಬಹುತೇಕ ದೇವಸ್ಥಾನಗಳ ಜೀರ್ಣೋದ್ಧಾರ, ಎಲ್ಲ ಸಮಾಜದ ಸಮುದಾಯ ಭವನಗಳ ನಿರ್ಮಾಣ-ಕ್ಕೆ ರೂ.10 ರಿಂದ 20 ಲಕ್ಷ ಅನುದಾನ ನೀಡಲಾಗಿದ್ದು, ಉಳಿದಿರುವ ದೇವಸ್ಥಾನಗಳಿಗೂ ಹಂತ ಹಂತವಾಗಿ ನೀಡಲಾಗುವುದು."




- ಬಸನಗೌಡ ಪಾಟೀಲ, ಯತ್ನಾಳ ಶಾಸಕರು, ವಿಜಯಪುರ

### ಅಕ್ಕಮಹಾದೇವಿ ಮಹಿಳಾ ವಿವಿಯಲ್ಲಿ 19ನೇ ಅಂತರ್ ಮಹಾವಿದ್ಯಾಲಯಗಳ ಯುವಜನೋತ್ಸವ 'ಶಕ್ತಿ ಸಂಭ್ರಮ' ಸಮಾರೋಪ

# ನಮ್ಮ ಸಂಸ್ಕೃತಿ-ಕಲೆ ಉಳಿಸಿ ಬೆಳೆಸೋಣ :ಡಾ.ಜಾವೀದ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಇಂದಿನ ದಿನಮಾನದಲ್ಲಿ ನಮ್ಮ ಸಾಂಸ್ಕೃತಿಕ ಕಲೆಗಳು ಮರೆಯಾಗುತ್ತಿದ್ದು, ಇಂತಹ ಯುವಜನೋತ್ಸವ ಕಾರ್ಯಕ್ರಮಗಳು ನಮ್ಮ ಕಲೆಗಳನ್ನು ಉಳಿಸಿ ಬೆಳೆಸುವಂತೆ ಮಾಡುತ್ತಿರುವುದು ಸಂತಸದ ವಿಷಯ ಎಂದು ರಾಷ್ಟ್ರೀಯ ಯುವ ಪ್ರಶಸ್ತಿ ಪುರಸ್ಕೃತ ಸಂಘದ ಅಧ್ಯಕ್ಷ ಡಾ.ಜಾವೀದ ಜಮಾದಾರ ಹೇಳಿದರು.





ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಆಯೋಜಿಸಿರುವ 19ನೇ ಅಂತರ್ ಮಹಾವಿದ್ಯಾಲಯಗಳ ಯುವಜನೋತ್ಸವ 'ಶಕ್ತಿ ಸಂಭ್ರಮ' ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಪ್ರಸ್ತುತ ಕಾಲದಲ್ಲಿ ನಾವೆಲ್ಲರೂ ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರು ಹೋಗುವ ಮೂಲಕ ನಮ್ಮ ಸಂಸ್ಕೃತಿ, ಕಲೆ, ಭಾಷೆ ಎಲ್ಲವನ್ನು ಮರೆಯುತ್ತಿದ್ದೇವೆ. ಅದರಲ್ಲೂ ಇಂದಿನ ಯುವಜನತೆಗೆ ನಮ್ಮ ಸಾಂಸ್ಕೃತಿ-ಕ ಕಲೆಗಳ ಬಗ್ಗೆ ತಿಳುವಳಿಕೆಯೆ ಇರದ ಮಟ್ಟಿಗೆ ನಾವೆಲ್ಲರೂ ತಲುಪಿದ್ದೇವೆ. ಇಂತಹ ಸಂದರ್ಭದಲ್ಲಿ ನಮ್ಮ ಸಂಸ್ಕೃತಿ, ಕಲೆಯನ್ನು ಬೆಳೆಸುವ ಜವಾಬ್ದಾರಿ ನಮ್ಮ ಮೇಲಿದೆ. ನಮ್ಮ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ವತಿಯಿಂದ ಈ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಯುವಜನತೆಯಲ್ಲಿ ನಮ್ಮ ಸಾಂಸ್ಕೃತಿಕ ಕಲೆಗಳ ಬಗ್ಗೆ ಅರಿವು ಮೂಡಿಸುತ್ತಿರುವುದು ಹೆಮ್ಮೆಯ ವಿಷಯ. ಅತ್ಯಂತ ಅಚ್ಚುಕಟ್ಟಾಗಿ ಈ ಶಕ್ತಿ ಸಂಭ್ರಮವನ್ನು ಹಮ್ಮಿಕೊಂಡಿದ್ದಾರೆ. ಹೀಗೆ ಮುಂಬರುವ ದಿನಗಳಲ್ಲಿ ನಾವು ಕೂಡ ಈ ಶಕ್ತಿ ಸಂಭ್ರಮ ಸಮಾರಂಭಕ್ಕೆ ಸಹಕಾರ ನೀಡಲು ಇಚ್ಛಿಸುತ್ತೇವೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ವಿವಿಯ ಸಿಂಡಿಕೇಟ್ ಸದಸ್ಯ ಡಾ.ಎಸ್.ಜೆ.ಮಾಡ್ಯಾಳ ಮಾತನಾಡಿ, ಕರ್ನಾಟಕ ರಾಜ್ಯದಲ್ಲಿ ಇರುವ ಏಕೈಕ ಮಹಿಳಾ ವಿಶ್ವವಿದ್ಯಾನಿಲಯ ನಮ್ಮದು. ಇಂದಿನ ದಿನಮಾನದಲ್ಲಿ ಮಹಿಳೆಯರು ಎಲ್ಲ ಕ್ಷೇತ್ರದಲ್ಲಿಯೂ ಮುಂದೆ ಇರುವ ಮೂಲಕ ಸಾಧನೆಯಲ್ಲಿ ತಮ್ಮದೇ ಆದ ಛಾಪು ಮೂಡಿಸುತ್ತಿದ್ದಾರೆ. ಅವರಿಗೆ ಇನ್ನು ಹೆಚ್ಚಿನ ಅವಕಾಶಗಳು ಸಿಗಬೇಕು. ಎಲ್ಲ ಸಾಮಾಜಿಕ ಸಮಸ್ಯೆಗಳನ್ನು ತೊಡೆದು ಹಾಕಿ ಮಹಿಳೆಯರು ಮುಂದೆ ಬರಬೇಕು ಎಂದು ಆಶಯ ವ್ಯಕ್ತಪಡಿಸಿದರು.

ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿ ಪಠ್ಯೇತರ ಚಟುವಟಿ-ಕೆಗಳಲ್ಲಿ ಭಾಗವಹಿಸುವ ಮೂಲಕ ವ್ಯಕ್ತಿತ್ವ ವಿಕಸನ ಮಾಡಿಕೊಳ್ಳಬೇಕು ಎಂದರು.

ಮೌಲ್ಯಮಾಪನ ಕುಲಸಚಿವ ಪ್ರೊ. ಎಚ್.ಎಂ.ಚಂದ್ರಶೇಖರ್ ಮಾತನಾಡಿ, ನಮ್ಮ ವಿವಿಯು ಈ ಯುವಜನೋತ್ಸವ 'ಶಕ್ತಿ ಸಂಭ್ರಮ'ವು ಸಾಂಸ್ಕೃತಿಕ ಜಾತ್ರೆಯಂತೆ ಕಂಗೊಳಿಸುತ್ತಿತ್ತು. ಇಂತಹ ಸ್ಪರ್ಧೆಗಳಲ್ಲಿ ಸೋಲು-ಗೆಲುವು ಸಾಮಾನ್ಯ. ಆದ-'ರೆ ನೀವೆಲ್ಲರೂ ಇಲ್ಲಿಯವರೆಗೂ ಬಂದು ಭಾಗವಹಿಸುವುದು ಮುಖ್ಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಿಳಾ ವಿವಿಯ ಕುಲಪತಿ ಪ್ರೊ.ಬಿ.ಕೆ. ತುಳಸಿಮಾಲ ಮಾತನಾಡಿ, ಈ ವೇದಿಕೆ ಮೇಲೆ ಅತ್ಯಂತ ಹೆಮ್ಮೆ ಮತ್ತು ಸಾರ್ಥ-'ಕತೆಯ ಭಾವದಿಂದ ನಾನು ನಿಂತಿದ್ದು, ಈ ಮೂರು ದಿನದ ಸಂಭ್ರಮ ನೋಡಿ ಅತೀವ ಸಂತಸವಾಗಿದೆ. ವಿವಿಧ ಕಾಲೇಜುಗಳಿಂದ ಆಗಮಿಸಿದ ಹಲವಾರು ವಿದ್ಯಾರ್ಥಿಗಳು ಈ ವೇದಿಕೆ ಮೂಲಕ ತಮ್ಮ ಪ್ರತಿಭೆಗಳನ್ನು ಅನಾವರಣಗೊಳಿಸಿದ್ದಾರೆ. ಇದು ತಮ್ಮ ಪ್ರತಿಭೆಯನ್ನು ಮತ್ತಷ್ಟು ಬೆಳೆಸಿಕೊಳ್ಳುವಲ್ಲಿ ಈ ವೇದಿಕೆ ಸಾಕ್ಷಿಯಾಗಿದ್ದು ಅತ್ಯಂತ ಖುಷಿಯ ವಿಚಾರ ಎಂದು ಹೇಳಿದರು.

ಸಮಾರಂಭದಲ್ಲಿ ವಿವಿಧ ಕಾಲೇಜಿನಿಂದ ಆಗಮಿಸಿದ ಪ್ರಾಧ್ಯಾಪಕರು, ವ್ಯವಸ್ಥಾಪಕರು ಹಾಗೂ ವಿದ್ಯಾರ್ಥಿನಿಯರು ಯುವಜನೋತ್ಸವ 'ಶಕ್ತಿ ಸಂಭ್ರಮ'ದ ಕು-ರಿತು ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ವಿವಿಯ ತಾಂತ್ರಿಕ ಸಮಿತಿಯ ಸದಸ್ಯರು, ವಿವಿಧ ಕಾಲೇಜಿನಿಂದ ಆಗಮಿಸಿದ ಪ್ರಾಧ್ಯಾಪಕರು, ವಿದ್ಯಾರ್ಥಿಯರು, ವ್ಯವಸ್ಥಾಪಕರು, ಸಿಂಡಿಕೇಟ್ ಹಾಗೂ ಅಕಾಡೆಮಿಕ್ ಕೌನ್ಸಿಲ್ ಸದಸ್ಯರು, ವಿವಿಧ ವಿಭಾಗಗಳ ಮುಖ್ಯಸ್ಥರು, ಡೀನರು, ಪ್ರಾಧ್ಯಾಪಕರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗ ಹಾಗೂ ಸಂಶೋಧನಾ ವಿದ್ಯಾರ್ಥಿನಿಯರು, ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಯರು, ಮಾಧ್ಯಮ ಮಿತ್ರರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಭಾಗದ ವಿದ್ಯಾರ್ಥಿನಿಯರು ನಾಡಗೀತೆ ಮತ್ತು ಮಹಿಳಾ ಗೀತೆಯನ್ನು ಹಾಡಿದರು. ಪ್ರೊ.ವಿಷ್ಣು. ಎಂ.ಶಿಂದೆ ಸ್ವಾಗತಿಸಿ, ಅತಿಥಿಗಳನ್ನು ಪರಿಚಯಿಸಿದರು. ವಿದ್ಯಾರ್ಥಿನಿ ಕ್ಷೇಮಪಾಲನ ನಿರ್ದೇಶನಾಲಯದ ಸಹಾಯಕ ನಿರ್ದೇಶಕಿ ಡಾ.ಅಶ್ವಿನಿ ಕೆ.ಎನ್ ಯುವಜನೋತ್ಸವದ ಸಂಕ್ಷಿಪ್ತ ವರದಿ ವಾಚನ ಮಾಡಿದರು. ಪ್ರೊ.ಹನುಮಂತಯ್ಯ ಪೂಜಾರಿ ನಿರೂಪಿಸಿದರು. ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ನಿರ್ದೇಶಕಿ ಪ್ರೊ.ಶಾಂತಾದೇವಿ ಟಿ ವಂದಿಸಿದರು.

### ವಿವಿಮಪರವಾಗಿ ಗೌರವ ಸನ್ಮಾನ



ಇದೇ ಸಂದರ್ಭದಲ್ಲಿ ಮಹಿಳಾ ವಿವಿ ಕುಲಪತಿ ಪ್ರೊ.ಬಿ.ಕೆ.ತುಳಸಿಮಾಲ, ರಾಷ್ಟ್ರೀಯ ಯುವ ಪ್ರಶಸ್ತಿ ಪುರಸ್ಕೃತ ಸಂಘದ ಅಧ್ಯಕ್ಷ ಡಾ.ಜಾವೀದ ಜಮಾದಾರ, ಸಿಂಡಿಕೇಟ್ ಸದಸ್ಯ ಡಾ.ಎಸ್.ಜೆ.ಮಾಡ್ಯಾಳ, ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ.ಎಚ್.ಎಂ.ಚಂದ್ರಶೇಖರ್ ಹಾಗೂ ತಾಂತ್ರಿಕ ಸಮಿತಿಯ ಅಧ್ಯಕ್ಷ ಪ್ರೊ.ಪಿ.ಜಿ.ತಡಸದ ಹಾಗೂ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ನಿರ್ದೇಶಕಿ ಪ್ರೊ.ಶಾಂತಾದೇವಿ ಟಿ ಅವರನ್ನು ವಿಶ್ವವಿದ್ಯಾನಿಲಯದ ಪರವಾಗಿ ಸನ್ಮಾನಿಸಲಾಯಿತು. ಹಾಗೂ ವಿವಿಧ ಕಾಲೇಜಿನಿಂದ ಆಗಮಿಸಿದ ವ್ಯವಸ್ಥಾಪಕರಿಗೆ ಮತ್ತು ಮಹಿಳಾ ವಿವಿಯ ತಾಂತ್ರಿಕ ಸಮಿತಿಯ ಸದಸ್ಯರಿಗೆ ನೆನಪಿನ ಕಾಣಿಕೆಯನ್ನು ನೀಡಲಾಯಿತು.


### ಮುಂದಿನ ಯುವಜನೋತ್ಸವಕ್ಕೆ ರೂ.20 ಲಕ್ಷ ಅನುದಾನ!



" ಈ ಯುವಜನೋತ್ಸವದ ವೇದಿಕೆ ಮೇಲೆ ಎಲ್ಲ ರೀತಿಯ ಎಲ್ಲ ಕ್ಷೇತ್ರದ ಪ್ರತಿಭೆಗಳನ್ನು ಅನಾವರಣ ಮಾಡಿ, ವಿದ್ಯಾರ್ಥಿನಿಯರು ಯಾವ ಕ್ಷೇತ್ರದಲ್ಲಿಯೂ ಕಡಿಮೆ ಇಲ್ಲ ಎಂದು ಈ ಶಕ್ತಿ ಸಂಭ್ರಮ ತೋರಿಸಿ ಕೊಟ್ಟಿದೆ. ಮುಂದಿನ ವರ್ಷ ನಡೆಯುವ ಯುವಜನೋತ್ಸವಕ್ಕೆ 20 ಲಕ್ಷ ರೂಪಾಯಿಗಳ ಅನುದಾನ ಒದಗಿಸುವೆ."

■ - ಶಂಕರಗೌಡ ಸೋಮನಾಳ
ಕುಲಸಚಿವರು, ಮಹಿಳಾ ವಿವಿ ವಿಜಯಪುರ

## ಮಹಾನಗರ ಪಾಲಿಕೆಯಿಂದ ಅತಿಕ್ರಮಣ ತೆರವು ಕಾರ್ಯಾಚರಣೆ



■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ವಿಜಯಪುರ ಮಹಾನಗರ ಪಾಲಿಕೆವತಿಯಿಂದ ವಾರ್ಡ ನಂ.13ರ ಜನತಾ ಬಜಾರ, ನೆಹರು ಮಾರುಕಟ್ಟೆ ಬಳಿ ಹಾಗೂ ಎಬಿಎಸ್ ಮಾರುಕಟ್ಟೆ ಹತ್ತಿರ ಅತಿಕ್ರಮಣವನ್ನು ತೆರವುಗೊಳಿಸಲಾಯಿತು.

ನಗರದಲ್ಲಿ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಲು ಪಾಲಿಕೆಯ ಆಯುಕ್ತರಾದ ವಿಜಯಕುಮಾರ ಮೆಕ್ಕಳಕಿ ಅವರ ನೇತೃತ್ವದಲ್ಲಿ ಶುಕ್ರವಾರ ಅತಿಕ್ರಮಣ ತೆರವು ಕಾರ್ಯಾಚರಣೆ ಕೈಗೊಂಡಿದ್ದು, ನಗರದ ನೆಹರು ಮಾರ್ಕೆಟ್ ಹಿಂಭಾಗ, ಎಂ.ಆರ್.ಹೋಟೆಲ್ ಹತ್ತಿರ, ಕೆಎಸ್‌ಆರ್‌ಟಿಸಿ ಡಿಪೋ ಪಕ್ಕ, ಪ್ರವಾಸೋದ್ಯಮ ಮಂದಿರದ ಹಿಂದುಗಡೆ, ಸೈನಿಕ ಶಾಲೆ ರಸ್ತೆಯ ಜಿಮಖಾನಾ ಕ್ಲಬ್ ಹಿಂದೆ ಹಾಗೂ ಆಹಾರ ಮಾರಾಟಕ್ಕೆ ಇಂಡಿ ರಸ್ತೆಯಲ್ಲಿ ಜಿಲ್ಲಾ ಕ್ರೀಡಾಂಗಣದ ಹತ್ತಿರ ವೆಂಡಿಂಗ್ ಜೋನಗಳನ್ನು ಗುರುತಿಸಲಾಗಿದ್ದು, ಸದರಿ ನಿಗದಿತ ಸ್ಥಳಗಳಲ್ಲಿಯೇ ಬೀದಿ ಬದಿ ವ್ಯಾಪಾರಸ್ಥರು ವ್ಯಾಪಾರ-ವಹಿವಾಟು ನಡೆಸುವಂತೆ ತಿಳಿಸಲಾಗಿದೆ.

ಇಂದು ನಡೆದ ಅತಿಕ್ರಮಣ ತೆರವು ಕಾರ್ಯಾಚರಣೆಯಲ್ಲಿ ವಲಯ ಕಛೇರಿ-1ರ ವಲಯ ಆಯುಕ್ತರಾದ ಸುನೀಲ ಪಾಟೀಲ ಸೇ-ರಿದಂತೆ ಪಾಲಿಕೆ ಅಧಿಕಾರಿ-ಸಿಬ್ಬಂದಿಗಳು, ಪೊಲೀಸ್ ಇಲಾಖೆ ಅಧಿಕಾರಿ-ಸಿಬ್ಬಂದಿಗಳು ಉಪಸ್ಥಿತರಿದ್ದರು

### ಜಿಆರ್‌ಜಿ152 ಹಾಗೂ ಜಿಆರ್‌ಜಿ811 ತಳಿ ತೊಗರಿ ಬೀಜ ಬಿತ್ತನೆ ಮಾಡಿರುವ ಹೊಲಗಳಿಗೆ ಭೇಟಿ

## ಕೃಷಿ ವಿಜ್ಞಾನಿಗಳ ತಂಡದಿಂದ ತೊಗರಿ ಬೆಳೆ ವೀಕ್ಷಣೆ

■ ಉದಯರಶ್ಮಿ ದಿನಪತ್ರಿಕೆ



ಬಸವನಬಾಗೇವಾಡಿ: ತಾಲೂಕಿನ ಬಿಸನಾಳ ಗ್ರಾಮ ಸೇರಿದಂತೆ ವಿವಿಧ ಗ್ರಾಮಗಳಿಗೆ ಗುರುವಾರ ಸಂಜೆ ವಿಜ್ಞಾನಿಗಳ ತಂಡ ಹಾಗೂ ಕೃಷಿ ಅಧಿಕಾ-ರಿಗಳ ತಂಡ ಜಿಆರ್‌ಜಿ152 ಹಾಗೂ ಜಿಆರ್‌ಜಿ811 ತಳಿ ತೊಗರಿ ಬೀಜ ಬಿತ್ತನೆ ಮಾಡಿರುವ ಹೊಲಗಳಿಗೆ ಭೇಟಿ ನೀಡಿ ತೊಗರಿ ಬೆಳೆಯನ್ನು ವೀಕ್ಷಿಸಿದರು.

ಈ ಸಂದರ್ಭದಲ್ಲಿ ಹಾಜರಿದ್ದ ಅಖಂಡ ಕರ್ನಾಟಕ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಅವರು, ಕೃಷಿ ಇಲಾಖೆಯಿಂದ ವಿತರಿಸಿದ ಜಿಆರ್‌ಜಿ152 ಮತ್ತು ಜಿಆರ್‌ಜಿ811 ತೊಗರಿ ಬೀಜ ಕಳಪೆಯಾಗಿವೆ. ಬೀಜ ಕಳಪೆಯಾಗಿರುವದರಿಂದಾಗಿ ತೊಗರಿ ಕಾಯಿ ಹಿಡಿದಿಲ್ಲ. ಹವಾಮಾನದ ವೈಪ-ರೀತ್ಯಯಾಗಲಿ ಇನ್ನಿತರ ಯಾವುದೇ ಸಮಸ್ಯೆ ತೊಗರಿ ಬೆಳೆ ಪರಿಣಾಮ ಬೀರಿಲ್ಲ. ಬೀಜ ಕಳಪೆಯಿಂದಾಗಿಯೇ ಈ ತೊಗರಿ ಬೆಳೆಗೆ ಕಾಯಿ ಆಗಿಲ್ಲ. ಇದರಿಂದಾಗಿ ರೈತರು ಮೋಸ ಹೋಗಿದ್ದಾರೆ. ಈ ಬೀಜ ವಿತರಿಸಿದ ಕಂಪನಿಯವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಿ ಕಪ್ಪು ಪಟ್ಟಿಗೆ ಸೇರಿಸಬೇಕು. ವಿಮೆ ಕಟ್ಟದೇ ಇರುವ ರೈತರಿಗೂ, ವಿಮೆ ಕಟ್ಟಿದ ರೈತರಿಗೂ ಈ ಬೆಳೆಗೆ ಸೂಕ್ತ ಬೆಳೆ ಪರಿಹಾರವನ್ನು ಸರ್ಕಾರ ನೀಡಲು ಕ್ರಮ ತೆಗೆದುಕೊಳ್ಳಬೇಕು. ಈ ತೊಗರಿ ಬೆಳೆಯನ್ನು ಜಿಲ್ಲಾಧಿಕಾರಿಗಳಿಗೆ, ಕೃಷಿ ಇಲಾಖೆಯ ಆಯುಕ್ತರ ಮುಂದೆ ತೆಗೆದುಕೊಂಡು ಹೋಗಿ ಈ ಬೆಳೆಯ ಬಗ್ಗೆ ರೈತ ಸಂಘವು ಗಮನ ತಂದಿತ್ತು. ಸಂಘದ ಮನವಿ ಸ್ಪಂದಿಸಿ ಇದೀಗ ಅಧಿಕಾರಿಗಳು, ವಿಜ್ಞಾನಿಗಳು ಪರಿಶೀಲನೆ ಮಾಡುತ್ತಿರುವುದು ಸ್ವಾಗತಾರ್ಹ ಎಂದರು.

ಈ ಸಂದರ್ಭದಲ್ಲಿ ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕ ಎಂ.ಎಚ್. ಯರಝರಿ ಈ ತೊಗರಿ ಬೆಳೆಯನ್ನು ಪರಿಶೀಲನೆ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಡಾ. ಎಂ.ಪಿ.ಪೊದ್ದಾರ,ಡಾ.ಗೆದ್ದಿನ್ನವರ, ಡಾ.ಸೋರಗಾಂವಿ, ಡಾ.ಬಸಮ್ಮ ಕುಂಬಾರ,ರೈತರಾದ ಬಸನಗೌಡ ಚೌಧರಿ, ಶ್ರೀಶೈಲ ಚೌಧರಿ, ವಿಠ್ಠಲ ವಂದಗನೂರ,ಈ-ರಯ್ಯ ಮುದುನೂರಮಠ ಇದ್ದರು.

### ವೃಕ್ಷಥಾನ್ ಹೆರಿಟೇಜ್ ರನ್ ನಲ್ಲಿ ಪಾಲ್ಗೊಳ್ಳಲು ಹೆಸರು ನೋಂದಾಯಿಸಿದ ಐಎಎಸ್ ಅಧಿಕಾರಿ

## ಅಧಿಕಾರಿ ವರ್ಗಕ್ಕೆ ಸ್ಪೂರ್ತಿ ಕೃಷಿ ಇಲಾಖೆ ಆಯುಕ್ತ ವೈ.ಎಸ್.ಪಾಟೀಲ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಹಿರಿಯ ಐಎಎಸ್ ಅಧಿಕಾರಿ ಮತ್ತು ಕೃಷಿ ಇಲಾಖೆ ಆಯುಕ್ತರಾಗಿರುವ ವೈ. ಎಸ್. ಪಾಟೀಲ ಅವರು ವೃಕ್ಷಥಾನ್ ಹೆರಿಟೇಜ್ ರನ್ ನಲ್ಲಿ ಪಾಲ್ಗೋಳ್ಳಲು ಹೆಸರು ನೋಂದಾಯಿಸುವ ಮೂಲಕ ಅಧಿಕಾರಿ ವರ್ಗಕ್ಕೆ ಸ್ಪೂರ್ತಿಯಾಗಿದ್ದಾರೆ. ವಿಜಯಪುರ ನಗರದಲ್ಲಿ ಡಿಸೆಂಬರ್ 22 ರಂದು ನಡೆಯಲಿರುವ ವೃಕ್ಷಥಾನ್ ಹೆರಿಟೇಜ್ ರನ್- -2024 ಮ್ಯಾರಾಥಾನ್ ನಲ್ಲಿ 5 ಕಿ. ಮೀ. ಓಟದಲ್ಲಿ ಪಾಲ್ಗೋಳ್ಳಲು ಅವರು ಹೆಸರು ನೋಂದಣಿ ಮಾಡಿದ್ದಾರೆ. ಈ ಮುಂಚೆ ವಿಜಯಪುರ ಉಪವಿಭಾಗಾಧಿಕಾರಿಯಾಗಿ ಮತ್ತು ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸಿರುವ ಅವರು, ತೋಟಗಾರಿಕೆ ಇಲಾಖೆಯ ಆಯುಕ್ತರಾಗಿಯೂ ಕರ್ತವ್ಯ ನಿರ್ವಹಿಸಿದ್ದಾರೆ.ಸದಾ ಲವಲವಿಕೆಯಿಂದ ಇರುವ ಹಿರಿಯ ಐಎಎಸ್ ಅಧಿಕಾರಿಯೂ ಆಗಿರುವ ವೈ. ಎಸ್. ಪಾಟೀಲ ಅವರು, ಕೊರೊನಾ ಲೌಕಡೌನ್ ಸಮಯದಲ್ಲಿ ಮಾಡಿರುವ ಸೇವೆ ಜನಮಾನಸದಲ್ಲಿ ಇಂದಿಗೂ ಸ್ಮರಣೀಯವಾಗಿದೆ. ವಿಜಯಪುರ ಜಿಲ್ಲೆಯಲ್ಲಿ ಉಪವಿಭಾಗಾಧಿಕಾರಿ ಮತ್ತು ನಂತರ ಜಿಲ್ಲಾಧಿಕಾರಿಯಾಗಿದ್ದಾಗ ಅವರು ಮಾಡಿರುವ ಕೆಲಸಗಳನ್ನು ಇಂದಿಗೂ ಸಾರ್ವಜನಿಕರು ಸ್ಮ-ರಿಸುತ್ತಿದ್ದಾರೆ. ವೈ. ಎಸ್. ಪಾಟೀಲ ಅವರು ವೃಕ್ಷಥ-ಾನ್ ಹೆರಿಟೇಜ್ ರನ್ ಓಟದಲ್ಲಿ ತಮ್ಮ ಹೆಸರು ನೋಂದಾಯಿಸಿರುವುದು ಜಿಲ್ಲೆಯ ಮತ್ತು ರಾಜ್ಯದ ಅಧಿಕಾರಿಗಳೂ ಕೂಡ ಪಾಲ್ಗೋಳ್ಳಲು ಸ್ಪೂರ್ತಿ ನೀಡಿದೆ.

### ಬಾಲಮಂದಿರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅಧಿಕಾರಿಗಳಿಗೆ ಸೂಚನೆ

## ಮಕ್ಕಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಡಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ಬಾಲಕಿಯರ ಬಾಲ ಮಂದಿರ ಹಾಗೂ ಸರ್ಕಾರಿ ಬಾಲಕರ ಬಾಲ ಮಂದಿರಕ್ಕೆ ಗುರುವಾರ ಸಂಜೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಅನಿ-ರೀಕ್ಷಿತ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಬಾಲ ಮಂದಿರಗಳ ಮೂಲಭೂತ ಸೌಕರ್ಯ ಪರಿಶೀಲಿಸಿದ ಅವರು, ಬಾಲ ಮಂದಿರದಲ್ಲಿರುವ ಮಕ್ಕಳ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ, ಯಾವುದೇ ಕಾರಣ-ಕ್ಕೂ ಮಕ್ಕಳಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಶೌಚಾಲಯಗಳಲ್ಲಿ ಸ್ವಚ್ಛತೆ, ಕುಡಿಯುವ ನೀರು, ಸ್ನಾನಕ್ಕೆ ಬಿಸಿ ನೀರು, ಉತ್ತಮ ಆಹಾರ ಸೇರಿದಂತೆ ಮೂಲ ಸೌಕರ್ಯಗಳನ್ನು ಸಮರ್ಪಕವಾಗಿ ಮಕ್ಕಳಿಗೆ ಒದಗಿಸಬೇಕು. ಕೌಶಲ್ಯತೆಯನ್ನು ಹೆಚ್ಚಿಸಲು ವಿದ್ಯಾಭ್ಯಾಸದ ಜೊತೆಗೆ ಪಠ್ಯೇತರ ಚಟುವಟಿ-ಕೆಗಳನ್ನು ಕೈಗೊಳ್ಳಬೇಕು ಎಂದು ಅಧಿಕಾ-ರಿಗಳಿಗೆ ಸೂಚಿಸಿದರು. ಬಾಲಮಂದಿರದ ಮಕ್ಕಳೊಂದಿಗೆ ಸಂವಾದ ನಡೆಸಿದ ಅವರು, ಮಕ್ಕಳಯೋಗ ಕ್ಷೇಮ ವಿಚಾರಿಸಿದರು.ಸತತ ಅಧ್ಯಯನಶೀಲತೆ ರೂಢಿಸಿಕೊಳ್ಳಬೇಕು. ಎಲ್ಲಾ ವಿಷಯಗಳನ್ನು ಕರಗತ ಮಾಡಿಕೊಳ್ಳಬೇಕು ಹೇಳಿದರು. ಸರ್ಕಾರಿ ಬಾಲಕಿಯರ ಬಾಲ ಮಂದಿರದ ಕಟ್ಟಡ ಪರಿಶೀಲನೆ ನಡೆಸಿದ ಅವರು, ಕಟ್ಟಡದ ಅಗತ್ಯ ದುರಸ್ತಿ ಕಾಮಗಾರಿ ಕೈಗೊಳ್ಳುವಂತೆಯೂ, ಬಾಲಕರ ಬಾಲಮಂದಿರದ ಆವರಣದಲ್ಲಿ ವಿದ್ಯುದ್ದೀಪ ಅಳವಡಿಸುವ ವ್ಯವಸ್ಥೆ ಮಾಡುವಂತೆ ಸೂಚಿಸಿದರು. ಮಕ್ಕಳ ಆಟಕ್ಕಾಗಿ ಆಟದ ಮೈದಾನದಲ್ಲಿ ಓಪನಜಿಮ್ ವ್ಯವಸ್ಥೆ ಕಲ್ಪಿಸಲು ಮಹಾನಗರಪಾಲಿಕೆಆಯುಕ್ತರಿಗೆಸೂಚಿಸಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಆಯುಕ್ತ ವಿಜಯಕುಮಾರ ಮೆಕ್ಕಳಕಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಕೆ.ಕೆ. ಚವ್ಹಾಣ, ಬಸವರಾಜ ಜಿಗಳೂರು ಸೇ-ರಿದಂತೆ ಅಧಿಕಾರಿ,ಸಿಬ್ಬಂದಿ ಉಪಸ್ಥಿತರಿದ್ದರು.

### ಪ್ರತಿಯೊಬ್ಬರೂ ಶೌಚಾಲಯ ಬಳಸಿ, ಬಹಿರ್ದೆಸೆ ಮುಕ್ತ ಗ್ರಾಮ ಮಾಡೋಣ | ಜಿ.ಪಂ ಯೋಜನಾ ನಿರ್ದೇಶಕ ಬಿ.ಎಸ್ ರಾಥೋಡ ಕರೆ

## ನಮ್ಮ ಶೌಚಾಲಯ ನಮ್ಮ ಗೌರವ ವಿಶೇಷ ಆಂದೋಲನಕ್ಕೆ ಚಾಲನೆ

■ ಉದಯರಶ್ಮಿ ದಿನಪತ್ರಿಕೆ

ಚಡಚಣ: ಪ್ರತಿಯೊಬ್ಬರು ತಮ್ಮ ಮನೆ, ಸುತ್ತಮುತ್ತಲಿನ ವಾತಾವರಣವನ್ನು ಸ್ವಚ್ಛವಾಗಿ, ನೈರ್ಮಲ್ಯದಿಂದ ಕಾಪಾಡಬೇಕು. ಪ್ರತಿಯೊಬ್ಬ ಸಾರ್ವಜನಿಕರು ಶೌಚಾಲಯಗಳನ್ನು ತಮ್ಮ ಮನೆ ಶೌಚಾಲಯಗಳಂತೆ ಬಳಸಿಕೊಂಡ ಬಹಿರ್ದೆಸೆ ಮುಕ್ತ ಸಮಾಜ ನಿರ್ಮಾಣ-ಕ್ಕೆ ಮುಂದಾಗಬೇಕು ಎಂದು ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕ ಬಿ.ಎಸ್ ರಾಠೋಡ ಅವರು ಹೇಳಿದರು.

ಚಡಚಣ ತಾಲೂಕಿನ ನಿವರಗಿ ಹಾಗೂ ಹಲಸಂಗಿ ಗ್ರಾಮದಲ್ಲಿ ವಿಜಯಪುರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಚಡಚಣ ತಾಲೂಕು ಪಂಚಾಯಿತಿ ವತಿಯಿಂದ ವಿಶ್ವ ಶೌಚಾಲಯ ದಿನದ ಅಂಗವಾಗಿ ನವೆಂಬರ್ 19 ರಿಂದ ಡಿಸೆಂಬರ್ 10 ರವರೆಗೆ ನಡೆಯುತ್ತಿರುವ 'ನಮ್ಮ ಶೌಚಾಲಯ, ನಮ್ಮ ಗೌರವ ಆಂದೋಲನ'ಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

ಸಮಾಜದಲ್ಲಿ ನೈರ್ಮಲ್ಯ ಕಾಪಾಡುವುದರಿಂದ ನಮ್ಮ ಆರೋಗ್ಯ ವೃದ್ಧಿಸಿಕೊಳ್ಳಬಹುದು. ಹಾಗಾಗಿ ಪ್ರತಿಯೊಬ್ಬರೂ ಬಯಲು ಶೌಚ ಮಾಡುವುದನ್ನು ಬಿಟ್ಟು ಮನೆ ಶೌಚಾಲಯಗಳನ್ನು ಬಳಸುವ ಜತೆಗೆ ಸುತ್ತ ಮುತ್ತಲಿನ ಪ್ರತಿಯೊಬ್ಬ ಜನರು ಶೌಚಾಲಯ ಬಳಸುವಂತೆ ಪ್ರೇರಣೆ ತುಂಬಬೇಕು ಎಂದು ಸಾರ್ವಜನಿಕರಲ್ಲಿ ಕರೆ ನೀಡಿದರು.

ಈ ಸಂದರ್ಭದಲ್ಲಿ ನಿವರಗಿ ಮತ್ತು ಹಲಸಂಗಿ ಗ್ರಾಮದಲ್ಲಿ ಜನರು ಬಳಕೆ ಮಾಡುತ್ತಿರುವ ಶೌಚಾಲಯವನ್ನು ವೀಕ್ಷಣೆ ಮಾಡಿ, ಶೌಚಾಲಯಗಳಿಗೆ ಬಣ್ಣ ಬಳಿಯುವುದರ ಮೂಲಕ ಅಭಿಯಾನದಲ್ಲಿ ಎಲ್ಲರೂ ಪಾಲ್ಗೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಶೌಚಾಲಯ ಬಳಕೆ ಹಾಗೂ ಸ್ವಚ್ಛತೆಯ ಕುರಿತು ಗ್ರಾಮಸ್ಥ-ರಿಗೆ ಅರಿವು ಮೂಡಿಸುವ ದೃಷ್ಟಿಯಿಂದ ಗ್ರಾಮದಲ್ಲಿ ಜಾಗೃತಿ ಜಾಥಾ ನಡೆಸಲಾಯಿತು.

ಈ ಆಂದೋಲನದಲ್ಲಿ ಚಡಚಣ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಸಂಜಯ್ ಖಡಗೇಕರ್, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನಾ ಸಹಾಯಕ ನಿರ್ದೇಶಕ ಮಹಾಂತೇಶ ಹೋಗಡಿ, ಯೋಜನಾಧಿಕಾರಿ ಶಿವದತ್ತ ಕೊಟ್ಟಲಗಿ, ಜಿ.ಪಂ ಸ್ವಚ್ಛ ಭಾರತ ಅಭಿಯಾನ ಶಾಖಾ ಅಧಿಕಾರಿ ಅನುಪಮಾ, ಗ್ರಾ.ಪಂ ಅಭಿವೃದ್ಧಿ ಅಧಿಕಾರಿಗಳು, ತಾಂತ್ರಿಕ ಸಂಯೋಜಕರು ಹಾಗೂ ಸಿಬ್ಬಂದಿ ವರ್ಗದವರು ಸೇರಿದಂತೆ ಸಾರ್ವಜನಿಕರು ಭಾಗ ವಹಿಸಿದ್ದರು.



# ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪಿಂಚಣಿದಾರರಿಂದ ಮನವಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಇ.ಪಿ.ಎಸ್-95 ಪಿಂಚಣೀದಾರರು ಸುಮಾರು 10-12 ವರ್ಷಗಳಿಂಥ ಹೋರಾಟ ಮಾಡುತ್ತಿದ್ದು, ಇದರಲ್ಲಿ ದೇಶದ ಸುಮಾರು 78 ಲಕ್ಷ ಇಪಿ.ಎಸ್.-95 ಪಿಂಚಣಿದಾರರು ಇದ್ದು, ಪಿಂಚಣಿದಾರರಿಗೆ ನ್ಯಾಯ ಕೊಡಿಸುವ ನಿಟ್ಟಿನಲ್ಲಿ ಇಂದು ಎನ್.ಎ.ಸಿ. ವಿಜಯಪುರ ಘಟಕದ ವತಿಯಿಂದ ವೀರಕುಮಾರ ಗಡಾದ ಇವರ ನೇತೃತ್ವದಲ್ಲಿ ಕೇಂದ್ರ ಸರಕಾರದ ವಿರುದ್ದ ಹೋರಾಟ ಕೈಗೊಂಡು ಇ.ಪಿ.ಎಫ್ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಎನ್.ಎ.ಸಿ. ಸಂಘಟನೆ ರಾಷ್ಟ್ರಾದ್ಯಂತ 27 ಜಿಲ್ಲೆಗಳಲ್ಲಿ ಹಾಗೂ 4 ಟೇರಿಟೇರಿಗಳಲ್ಲಿ ಸ್ಥಾಪನೆಯಾಗಿದ್ದು ರಾಷ್ಟ್ರಾದ್ಯಂತ ಈಗಲೂ ಬೇಡಿಕೆ ಈಡೇರಿಸದಿದ್ದರೆ ದೇಶಾದ್ಯಂತ ಉಗ್ರ ಹೋರಾಟ ಮಾಡಲು ಸಿದ್ಧವಿದೆ ಎಂದು ಎನ್.ಎ.ಸಿ. ರಾಷ್ಟ್ರೀಯ ಸಂಚಾಲಕ ರಮಾಕಾಂತ ನರಗುಂದ ಅವರು ತಿಳಿಸಿದ್ದಾರೆ. ಪ್ರಸ್ತುತ ಡಿಸೆಂಬರ್-1 ರಂದು ದೇಶದ ಎಲ್ಲ ಸಂಸತ್ ಸದಸ್ಯರ ಮನೆ/ಕಛೇರಿ ಮುಂದೆ ಶಾಂತಿಯುತ ಮೌನ ಧರಣಿ ಸತ್ಯಾಗ್ರಹ ಕೈಕೊಳ್ಳಲಾಗುತ್ತಿದೆ ನಂತರ ಡಿಸೆಂಬರ್-10, 11ರಂದು ದೆಹಲಿ ಜಂತರ್ ಮಂತರದಲ್ಲಿ ಉಪವಾಸ ಕೈಕೊಳ್ಳಲಾಗುವದು ಎಂದರು. ಈ ಧರಣಿಯಲ್ಲಿ ಎನ್.ಎ.ಸಿ. ಉಪಾಧ್ಯಕ್ಷರಾದ ವೀರಕುಮಾರ ಗಡಾದ, ಎನ್.ಎ.ಸಿ. ಸಂಚಾಲಕರಾದ ಜಿ.ಎಸ್. ದೇಗಿನಾಳ, ಎನ್.ಎ.ಸಿ. ಜಂಟಿ ಕಾರ್ಯದರ್ಶಿ ಗುರುಭಟ್ಟ, ಎನ್.ಎ.ಸಿ. ಸಂಘಟಕ ಸಾತಿಪುಲೆ, ತೇರದಾಳ ಸುಮಾರು 100ಕ್ಕೂ ಹೆಚ್ಚು ಪಿಂಚಣೀದಾರರು ಉಪಸ್ಥಿತರಿದ್ದರು.

## ಸಾರ್ವಜನಿಕರಲ್ಲಿ ತೀವ್ರ ಕುತೂಹಲ । ಹಲವು ಸದಸ್ಯರಿಗೆ ಪ್ರವಾಸ ಭಾಗ್ಯ

# ಇಂದು ಗ್ರಾ.ಪಂ. ಅಧ್ಯಕ್ಷರ ವಿರುದ್ದ ಅವಿಶ್ವಾಸ ಮಂಡನೆ

■ ಉದಯರಶ್ಮಿ ದಿನಪತ್ರಿಕೆ




ಚಿಮ್ಮಡ: ಇಲ್ಲಿನ ಗ್ರಾಮ ಪಂಚಾಯತಿ ಅಧ್ಯಕ್ಷರ ವಿರುಧ್ಧ ಅವಿಶ್ವಾಸ ವ್ಯಕ್ತಪಡಿಸಿ ಹಲವು ಸದಸ್ಯರಿಂದ ಜಮಖಂಡಿ ಉಪ ವಿಭಾಗಾಧಿಕಾರಿಗಳಿಗೆ ದೂರು ಸಲ್ಲಿಸಲಾಗಿದ್ದು, ಸೂಚನೆ ಪರ್ಯಾಲೋಚಿಸಲು ಶನಿವಾರ (ನ.30) ಚಿಮ್ಮಡ ಗ್ರಾ.ಪಂ. ಕಾರ್ಯಾಲಯದಲ್ಲಿ ಸರ್ವ ಸದಸ್ಯರ ಸಭೆ ಕರೆಯಲಾಗಿದೆ. ಇಪ್ಪತ್ತೆಂಟು ಸದಸ್ಯಬಲದ ಇಲ್ಲಿನ ಗ್ರಾಮ ಪಂಚಾಯತಿಯಲ್ಲಿ ಕಳೆದ ಹದಿನೈದು ತಿಂಗಳ ಹಿಂದೆ ಬಿಜೆಪಿ ಬೆಂಬಲಿತ 19 ಸದಸ್ಯರ ಬೆಂಬ ಲದೊಂದಿಗೆ ಶ್ರೀಮತಿ ಮಾಲಾ ಅಶೋಕ ಮೋಟಗಿ ಅಧ್ಯಕ್ಷರಾಗಿ ಆಯ್ಕೆಗೊಂಡಿದ್ದರು. ನಂತರ ನಡೆದ ಆಂತರಿಕ ಬೆಳವಣಿಗೆಯಲ್ಲಿ ಮಾಲಾ ಅವರು ಕಾಂಗ್ರೆಸ್ ಪಕ್ಷ ಸೇರ್ಪಡೆ ಗೊಂಡಿದ್ದರು, 19/9 ಪರ ವಿರೋಧ ಬಲವಿರುವ ಪಂಚಾಯತಿಯಲ್ಲಿ ಬಿಜೆಪಿ ಬೆಂಬಲಿತ 19 ಸದಸ್ಯರು ಅವಿಶ್ವಾಸ ನಿರ್ಣಯ ಮಂಡಿಸಲು ಮುಂದಾಗಿ ಜಮಖಂಡಿ ಉಪ ವಿಭಾಗಾಧಿಕಾರಿ ಶ್ವೇತಾ ಮೋಹನ ಬಿರಡಿಕರರಿಗೆ ಮನವಿ ಸಲ್ಲಿಸಲಾಗಿದ್ದು, ಅವರು ವಿಶ್ವಾಸ ಮತಯಾಚನೆಗಾಗಿ ಶನಿವಾರ (ನ.30) ಚಿಮ್ಮಡ ಗ್ರಾ.ಪಂ. ಕಾರ್ಯಾಲಯದಲ್ಲಿ ಸರ್ವ ಸದಸ್ಯರ ಸಭೆ ಕರೆಯಲಾಗಿದ್ದು ಈ ಸಂಬಂದ ನೋಟಿಸ್ ಜಾರಿ ಮಾಡಿದ್ದಾರೆ. ಪ್ರವಾಸ ಭಾಗ್ಯ: ಈ ನಡುವೆ ಎಲ್ಲ ಸದಸ್ಯರನ್ನು ಒಗ್ಗಟ್ಟಿನಿಂದ ಇಡುವ ಕಾರಣ ಕಳೆದ ಮೂರು ದಿನಗಳಿಂದ ಹಲವು ಸದಸ್ಯರನ್ನು ಧಾರ್ಮಿಕ ಕ್ಷೇತ್ರಗಳ ಪ್ರವಾಸಕ್ಕೆ ಕರೆದೊ ಯ್ಯಲಾಗಿದ್ದು ಅವಿಶ್ವಾಸ ಮಂಡ 'ನೆಯ ದಿನವಾದ ಶನಿವಾರ ಎಲ್ಲ ಸದಸ್ಯರು ಗ್ರಾಮಕ್ಕೆ ಆಗಮಿಸಲಿದ್ದಾರೆ ಎನ್ನಲಾಗುತಿದ್ದು ಸದಸ್ಯರ ಮುಂದಿನ ನಡೆ ಕುತೂಹ ಲಕಾರಿ ಯಾಗಿದೆ. ಚಿಮ್ಮಡ ಗ್ರಾ.ಪಂ. ಇತಿಹಾಸದಲ್ಲಿಯೇ ಮೊದಲ ಬಾರಿಗೆ ಅಧ್ಯಕ್ಷರ ವಿರುದ್ದ ಅವಿಶ್ವಾಸ ಮಂಡನೆಯಾಗಿದ್ದು, ಎರಡೂ ಬಣಗಳು ತೆರೆಯ ಹಿಂದೆ ತೀವ್ರ ಕಸರತ್ತು ನಡೆಸುತಿದ್ದು ವಿಶ್ವಾಸಮತ ಯಾಚನೆಯ ದಿನ ಏನಾಗುವುದೋ ಎಂಬ ತೀವ್ರ ಕುತೂಹಲ ಸಾರ್ವಜನಿಕರಲ್ಲಿ ಮೂಡಿದೆ.

# ಪರಂಪರೆ ಪರಿಚಯಿಸಲು ಸಂಶೋಧನೆ ಅಗತ್ಯ :ಡಾ.ವೀರಶೆಟ್ಟಿ

■ ಉದಯರಶ್ಮಿ ದಿನಪತ್ರಿಕೆ




ಅಫಜಲಪುರ: ಅನೇಕರು ಆಳ್ವಿಕೆ ನಡೆಸಿದ ರಾಜ ಮನೆತನಗಳ ಸಾಂಸ್ಕೃತಿಕ ಇತಿಹಾಸವನ್ನು ಕುರಿತು ಮತ್ತು ಇಲ್ಲಿನ ಮೂಲ ಇತಿಹಾಸದ ಕುರಿತು ಅಧ್ಯಯನ ಅವಶ್ಯಕವಾಗಿದೆ ಎಂದು ವಿಭಾಗೀಯ ಪತ್ರಾಗಾರ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಡಾ.ವೀರಶೆಟ್ಟಿ ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಂತರಿಕ ಗುಣಮಟ್ಟ ಭರವಸೆ ಕೋಶ ಅಡಿಯಲ್ಲಿ ಇತಿಹಾಸ ವಿಭಾಗ ಮತ್ತು ಪತ್ರಗಾರ ಇಲಾಖೆ ವಿಭಾಗೀಯ ಕಚೇರಿಯ ಸಹಯೋಗದಲ್ಲಿ ನಡೆದ ಪತ್ರಗಾರ ಪರಿಚಯ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡುತ್ತಾ ಮೊಘಲರ ಆಳ್ವಿಕೆಯ ಕಾಲದ ಇತಿಹಾಸದ ದಾಖಲೆಗಳು ಪುಣೆ, ಮುಂಬೈನಲ್ಲಿವೆ, ನಿಜಾಮರ ಆಳ್ವಿಕೆಯ ಕಾಲದ ಇತಿಹಾದ ದಾಖಲೆಗಳು ಹೈದ್ರಾಬಾದ್‌ನಲ್ಲಿವೆ. ಕೆಲವು ದಾಖಲಾತಿಗಳು ಚೆನ್ನೈನಲ್ಲಿವೆ. ಇಷ್ಟಾಗಿಯೂ 39 ವಿಭಾಗಗಳಿಗೆ ಸಂಬಂಧ ಪಟ್ಟ 16 ಲಕ್ಷ ಕಡತಗಳೂ ಕಲಬುರಗಿಯಲ್ಲಿ ಲಭ್ಯವಿವೆ. ಇವುಗಳನ್ನು ವಿದ್ಯಾರ್ಥಿಗಳು ಸಂಶೋಧನೆಗಾಗಿ ಸಹಾಯ ಪಡೆದುಕೊಳ್ಳಬಹುದು. ಇನ್ನೂ ಹೆಚ್ಚಿನ ಇತಿಹಾಸ ಅರಿಯುವ ಸಲುವಾಗಿ ಸಂಶೋಧನೆಗಳು ಜಾರಿಯಲ್ಲಿವೆ ಎಂದು ಮಾಹಿತಿ ನೀಡಿದರು.

ವಿರೇಂದ್ರ ಪಾಟೀಲ್ ಕಾಲೇಜು ಪ್ರಾಚಾರ್ಯ ಕೆ. ನಾರಾಯಣ ಮಾತನಾಡುತ್ತಾ ನಮ್ಮ ತಾಲೂಕಿನಲ್ಲಿ ಸಾಕಷ್ಟು ಚಾರಿತ್ರಿಕ ಸ್ಥಳಗಳಿವೆ, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಬಹಮನಿಗಳು ಸೇರಿದಂತೆ ಅನೇಕ ಮನೆತನಗಳ ಆಳ್ವಿಕೆಗೆ ಒಳಪಟ್ಟ ಊರುಗಳು ಇವೆ. ಅವುಗಳಲ್ಲಿ ಅಡಗಿರುವ ಇತಿಹಾಸ ಹೊರ ತೆಗೆಯುವ ಕೆಲಸ ನಡೆಯಬೇಕಾಗಿದೆ ಎಂದರು. ಪ್ರಾಚಾರ್ಯ ಮಾಣಿಕರಾವ್ ಕುಲಕರ್ಣಿ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಪದವಿ ವಿದ್ಯಾರ್ಥಿಗಳು ಸದಾ ಸಂಶೋಧ ನಾತ್ಮಕವಾಗಿ ಅಧ್ಯಯನ ಮಾಡಬೇಕು. ಈ ನಿಟ್ಟಿನಲ್ಲಿ ಪತ್ರಗಾರ ಇಲಾಖೆ ಸಹಕಾರ ಪಡೆದುಕೊಳ್ಳಿ ಎಂದು ಕರೆ ನೀಡಿದರು. ಡಾ. ಸೂರ್ಯಕಾಂತ ಉಮಾಪೂರೆ, ಡಾ. ಸಾವಿತ್ರಿ ಕೃಷ್ಣ ಮಾತನಾಡಿದರು. ಡಾ. ಮಹ್ಮದ್ ಯೂನೂಸ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಹಿರೂ ರಾಠೋಡ, ಡಾ. ಚಿನ್ನಾ, ಡಾ. ಶ್ರೀದೇವಿ ರಾಠೋಡ, ಡಾ. ವಿನಾಯಕ ಕುಲಕರ್ಣಿ, ಡಾ. ನಾಗವೇಣಿ, ಡಾ. ಗಿರಿಜಾ, ಡಾ. ಕವಿತಾ ರಾಠೋಡ, ಡಾ. ಜಯಕುಮಾರ ನೂಲ್ಕರ್ ಸೇರಿದಂತೆ ವಿದ್ಯಾರ್ಥಿಗಳು ಇದ್ದರು. ಡಾ. ಸಂಗಣ್ಣ ಎಂ ಸಿಂಗೆ ಸ್ವಾಗತಿಸಿದರು. ಡಾ. ಸುರೇಖಾ ಕರೂಟಿ ನಿರೂಪಿಸಿದರು. ಡಾ. ದಶರಥ ವಂದಿಸಿದರು.

# ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಿಗೆ ಸನ್ಮಾನ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಡಿಸೆಂಬರ 2 ರಂದು ಇವಣಗಿ ಗ್ರಾಮದಲ್ಲಿ ನಡೆಯುವ ಬಸವನ ಬಾಗೇವಾಡಿ ತಾಲೂಕು 10ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆ ಯಾಗಿರುವ ಸಾಹಿತಿ ಸಿದ್ಧರಾಮ ಬಿರಾದಾರ ಅವರನ್ನು ಬಸವ ಜನ್ಮಭೂಮಿ ಪ್ರತಿಷ್ಠಾನ ಹಾಗೂ ಕನ್ನಡ ಪುಸ್ತಕ ಪರಿಷತ್ತಿನ ಪದಾಧಿಕಾರಿಗಳು ವಿಜಯಪುರದ ಅವರ ನಿವಾಸದಲ್ಲಿ ಆತ್ಮೀಯವಾಗಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಪ್ರತಿಷ್ಠಾನದ ಸಂಚಾಲಕ, ಸಾಹಿತಿ ಮುರುಗೇಶ ಸಂಗಮ ಮಾತನಾಡಿ, ಬಸವೇಶ್ವರರು ಜನಿಸಿ ಓಡಾಡಿದ ಬಸವನ ಬಾಗೇವಾಡಿಯ ನೆಲವೆ ಪಾವನ ಭೂಮಿ. ಈ ಪವಿತ್ರ ಕ್ಷೇತ್ರಕ್ಕೆ ಸಮೀಪದ ಇವಣಗಿ ಗ್ರಾಮ ಒಂದು ಸುಕ್ಷೇತ್ರ. ಇಂಥ ಪಾವನ ಪರಿಸರದಲ್ಲಿ ಜರುಗ ಲಿರುವ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆಯ ಸ್ಥಾನ ಸಾಹಿತಿ ಸಿದ್ಧರಾಮ ಬಿರಾದಾರ ಅವರಿಗೆ ಒಲಿದು ಬಂದಿರುವುದು ಸಂತಸದ ಸಂಗತಿ. ಮನಗೂಳಿ ಪಟ್ಟಣದ ಬಿರಾದಾರ ಅವರು ಉಕ್ಕಲಿ ಗ್ರಾಮದ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳಾಗಿ ಸೇವೆ ಸಲ್ಲಿಸುತ್ತಿದ್ದು, ಸಾಹಿತ್ಯ ಕೃಷಿ ಮಾಡುತ್ತ ಖುಷಿಯಾಗಿದ್ದಾರೆ. ಇವರ 11 ಕೃತಿಗಳು ಕನ್ನಡ ಸಾರಸ್ವತ ಲೋಕಕ್ಕೆ ಅರ್ಪ ಣೆ ಯಾಗಿದ್ದು ಹಿರಿಯ ಸಾಹಿತಿಗಳ ಮೆಚ್ಚುಗೆ ಪಡೆದಿವೆ ಎಂದರು. ಸಾಹಿತಿ ಶಂಕರ ಬೈಚಬಾಳ, ನಿ.ಶಿಕ್ಷಕ ಶಿವಲಿಂಗ ಕಾರಜೋಳ, ಸಾಹಿತಿ ಬಸ ನಗೌಡ ಬಿರಾದಾರ, ಶ್ರೀಕಾಂತ ಮಂಗಾನವರ ಹಾಗೂ ಉದ್ಯಮಿ ವೀರೇಶ ಬಿರಾದಾರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ರಾಷ್ಟ್ರೀಯ ಫ್ಲೋರೋಸಿಸ್ ತಡೆ ಜಾಗೃತಿ ಕಾರ್ಯಕ್ರಮ । ಶಾಲಾ ಮಕ್ಕಳಿಗೆ ಫ್ಲೋರೈಡ್ ಕುರಿತು ಅರಿವು

# ಫ್ಲೋರೈಡಯುಕ್ತ ನೀರು-ಆಹಾರ ಸೇವನೆ ಆರೋಗ್ಯಕ್ಕೆ ಮಾರಕ :ಡಾ.ಬಾಬುರಡ್ಡಿ

■ ಉದಯರಶ್ಮಿ ದಿನಪತ್ರಿಕೆ



ಚಿಕ್ಕಪಡಸಲಗಿ: ಸೇವಿಸುವ ಆಹಾರ ಹಾಗೂ ಕುಡಿಯುವ ನೀರಿನಲ್ಲಿ ಅಗತ್ಯಕ್ಕಿಂತಲೂ ಹೆಚ್ಚು ಫ್ಲೋರೈಡ್ ಯುತ ಅಂಶ ಇದ್ದರೆ ಫ್ಲೋರೋಸಿಸ್ ವ್ಯಾಧಿ ಬಾಧಿಸಿ ದೇಹದ ಶರೀರಕ್ಕೆ ಆವರಿಸುತ್ತದೆ. ಇದರಿಂದ ಭಾಗಶಃ ದೇಹದ ಹಲವಾರು ಭಾಗಗಳಲ್ಲಿ ಗಂಭೀರ ಸ್ವರೂಪದ ದುಷ್ಪರಿಣಾಮಗಳು ತಲೆದೋರುತ್ತವೆ. ಬಗೆಬಗೆಯ ಸಮಸ್ಯೆಗಳು ಉಲ್ಬಣಗೊಂಡು ನರಳಾಟದ ಯಾತನೆಯಲ್ಲಿ ಬದುಕು ಕಳೆಯುವಂತೆ ಮಾಡುತ್ತದೆ. ಕಾರಣ ಫ್ಲೋರೈಡ್ ಅಂಶವನ್ನು ಹೊಂದಿರುವ ನೀರು, ಆಹಾರ ಸೇವನೆ ಬಗ್ಗೆ ಯುವಜನತೆ ಬಹು ಜಾಗರೂಕತೆ ವಹಿಸಬೇಕು ಎಂದು ಆರೋಗ್ಯ ಇಲಾಖೆ ಜಿಲ್ಲಾ ಸಮಾಲೋಚಕ ಡಾ.ಬಾಬುರಡ್ಡಿ ಕೆಂಗಲಗುತ್ತಿ ಹೇಳಿದರು. ಚಿಕ್ಕಪಡಸಲಗಿ ಗ್ರಾಮದಲ್ಲಿ ಗದುಗಿನ ತೋಂಟದಾರ್ಯ ವಿದ್ಯಾಪೀಠ ಸಂಸ್ಥೆಯ ಶಿವಶರಣ ಹರಳಯ್ಯ ಸ್ಮಾರಕ ಪ್ರೌಢಶಾಲೆಯಲ್ಲಿ ಜಿಲ್ಲಾ ಆಸ್ಪತ್ರೆ ಬಾಗಲಕೋಟೆ ಫ್ಲೋರೋಸಿಸ್ ಪ್ರಯೋಗಾಲಯ ಜಿಲ್ಲಾ ಸಮೀಕ್ಷಾ ಘಟಕದ ವತಿಯಿಂದ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಾಗಲಕೋಟೆ ಇವರ ಆಶ್ರಯದಲ್ಲಿ ರಾಷ್ಟ್ರೀಯ ಫ್ಲೋರೋಸಿಸ್ ತಡೆ ಹಾಗೂ ನಿಯಂತ್ರಣ ಕುರಿತು ಶಾಲಾ ಮಕ್ಕಳಿಗಾಗಿ ಹಮ್ಮಿಕೊಂಡಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.ಸಾಮಾನ್ಯವಾಗಿ ಫ್ಲೋರೈಡ್ ಪ್ರಮಾಣವನ್ನು ಹೊಂದಿರುವ ಕುಡಿಯುವ ನೀರು, ಆಹಾರ ಜೊತೆಗೆ ಕೆಲವು ಔಷಧೀಯ ಸೇವನೆಯಿಂದ ಹಾಗೂ ಹೊಗೆ ಕಾರುವ ಕಾಖಾ9ನೆಗಳ ಮಲಿನ ಧೂಳಿನಿಂದ ಮಾರಕ ಫ್ಲೋರೈಡ್ ದೇಹದೊಳಗೆ ಪ್ರವೇಶಿಸಿದರೆ ಇದರಿಂದ ಫ್ಲೋರೋಸಿಸ್ ಕಾಯಿಲೆ ಉಂಟಾಗುತ್ತದೆ. ಈ ರೋಗಕ್ಕೆ ಯಾವುದೇ ರೀತಿಯ ವಯೋಮಿತಿಗಳಿಲ್ಲ.ಭೇದ ಭಾವಗಳಿಲ್ಲ. ಕಾರಣ ರೋಗ ತಡೆಗಟ್ಟುವುದು ಇಂದಿನ ಅಗತ್ಯವಿದೆ. ಆ ದಿಸೆಯಲ್ಲಿ ಜನರಲ್ಲಿ ಮೂಡುವ ಆರೋಗ್ಯಕರ ಜಾಗೃತ ಮನಸ್ಸು, ವಿಚಾರಗಳೇ ಫ್ಲೋರೋಸಿಸ್ ದಮನಕ್ಕೆ ಸೂಕ್ತ ಮದ್ದು ಎಂದರು. ಫ್ಲೋರೈಡ್ ರಹಿತ ಶುದ್ಧ ನೀರು, ಕ್ಯಾಲ್ಸಿಯಂ ಮತ್ತು ವಿಟಮಿನ್ ಸಿ ಯುತ ಆಹಾರ ಸೇವನೆಯಿಂದ ಹಾಗೂ ಫ್ಲೋರೈಡ್ ರಹಿತ ಟೂತ್‌ಪೇಸ್ಟ್, ಬಾಯಿಗೆ ಸ್ವಚ್ಛ ದ್ರಾವಣವನ್ನು ಉಪಯೋಗಿಸುವುದರಿಂದ ಫ್ಲೋರೋಸಿಸ್ ಗೆ ತುತ್ತಾಗದಂತೆ ನೋಡಿಕೊಳ್ಳಬಹುದು ಎಂದರು.

ಮೂಳೆಗಳ ನೋವು,ಕೀಲುಗಳ ಬಿಗಿತ ರೋಗದ ಆರಂಭಿಕ ಹಂತವಾಗಿದ್ದು ಎರಡನೇ ಹಂತದಲ್ಲಿ ವಿನಾಶಕಾರಿ ಫ್ಲೋರೋಸಿಸ್ ವ್ಯಾಧಿ ಗಂಭೀರತನದ ಆರೋಗ್ಯ ಸಮಸ್ಯೆ ಸೃಷ್ಟಿ ಮಾಡುತ್ತದೆ. ಇದೊಂದು ಮನುಕುಲಕ್ಕೆ ಮಾರಕ ಕಾಯಿಲೆಯಾಗಿದ್ದು ದೀರ್ಘಕಾಲದವರೆಗೆ ಕೀಲು, ಸ್ನಾಯುಗಳು, ಉದ್ದ ಮೊಳೆಗಳ ವಿಪರೀತ ನೋವು ಹಾಗೂ ಮೊಳೆಗಳ ಸವೇತ ಉಂಟುಮಾಡುವ ಮೂಲಕ ಹೀನಾಯ ಸ್ಥಿತಿಗೆ ತಂದೊಡ್ಡುತ್ತದೆ. ಇನ್ನೂ ಮೂರನೇ ಹಂತದಲ್ಲಿ ಕತ್ತಿನ ಮೊಳೆ, ಬೆನ್ನಿನ ಮೊಳೆ, ಎಲುಬುಗಳ ಬಾಗುವಿಕೆ ಆರಂಭಿಸುತ್ತದೆ. ದೇಹದ ನರಗಳ ಸತ್ವ ಹಿಮ್ಮೆಟ್ಟಿಸಿ ವ್ಯಾಪಕ ತೊಂದರೆ, ತಾಪತ್ರಯ ಅನುಭವಿಸುವಂತೆ ನರಳಾಡಿಸುತ್ತದೆ. ಈ ವೇಳೆ ವಾಕರಿಕೆ, ವಾಂತಿ, ಅಜೀರ್ಣ, ಹೊಟ್ಟೆ ಉಬ್ಬರ, ನೋವು ಕಾಣಿಸುತ್ತದೆ. ಮನುಷ್ಯ ನಿಶ್ಯಕ್ತಿಗೆ ಒಳಗಾಗಿ ಪದೇಪದೇ ಮೂತ್ರ ವಿಸರ್ಜನೆಯಿಂದ ನಿತ್ರಾಣಾವಸ್ಥೆಯಲ್ಲಿ ಕೆಂಗಡುವಂತೆ ಮಾಡುತ್ತದೆ. ಈ ಮಾರಕ ಕಾಯಿಲೆಯಿಂದ ದೂರುಳಿಯಲು ಮೂತ್ರ ಪರೀಕ್ಷೆ ಹಾಗೂ ಸೇವಿಸುವ ನೀರಿನ ಪರೀಕ್ಷೆ ಮೂಲಕ ಫ್ಲೋರೋಸಿಸ್ ವ್ಯಾಧಿ ಬಗ್ಗೆ ಖಚಿತ ಪಡಿಸಿಕೊಳ್ಳಲು ಜನತ ಮುಂದಾಗಬೇಕು ಎಂದರು. ದೀರ್ಘಕಾಲದವರೆಗೆ ನಿರಂತರ ದೇಹಕ್ಕೆ ಅವಶ್ಯಕತೆಕ್ಕಿಂತ ಹೆಚ್ಚು ಫ್ಲೋರೈಡ್ ಯುತ ಆಹಾರ,ನೀರು ಬಳಸಿದರೆ ಖಂಡಿತ ಮೊಳೆಗಳ ಸವೆತಕ್ಕೆ ಒಳಗಾಗಿ ಫ್ಲೋರೋಸಿಸ್ ವ್ಯಾಧಿ ಬರುತ್ತದೆ ಎಂದು ಎಚ್ಚರಿಸಿದರು.

ಮಕ್ಕಳಲ್ಲಿ ಹಲ್ಲುಗಳು ಪರಿಪಕ್ವವಾಗಿ ಬೆಳೆಯುವ ಮುನ್ನ ಹೆಚ್ಚು ಪ್ರಮಾಣದ ಫ್ಲೋರೈಡ್ ಸೇವಿಸಿದರೆ ಫ್ಲೋರೋಸಿಸ್ ಬಾಧೆ ಉಲ್ಬಣಕ್ಕೆ ಕಾರಣವಾಗುತ್ತದೆ. ಅಗತ್ಯಕ್ಕಿಂತ ಅಲ್ಪ ಪ್ರಮಾಣದಲ್ಲಿ ಕ್ಯಾಲ್ಸಿಯಂ, ವಿಟಮಿನ್ ಸಿ ಸೇವಿಸುವ ಮಕ್ಕಳಲ್ಲಿ ಹಾಗೂ ವಯಸ್ಕರಲ್ಲಿ ಫ್ಲೋರೋಸಿಸ್ ತೀವ್ರತೆ ಕಾಡುತ್ತದೆ. ಫ್ಲೋರೈಡ್ ರಹಿತ ನೀರು ಸೇವನೆಯಿಂದ ಫ್ಲೋರೋಸಿಸ್ ನ್ನು ತಡೆಗಟ್ಟಬಹುದು ಎಂದರು. ಫ್ಲೋರೈಡ್ ರಹಿತ ಟೂತ್‌ಪೇಸ್ಟ್, ಬಾಯಿ ಸ್ವಚ್ಛ ದ್ರಾವಣಗಳನ್ನು ಬಳಸವುದರಿಂದ ಫ್ಲೋರೋಸಿಸ್ ಕಾಯಿಲೆ ತಡೆಗಟ್ಟಬಹುದು ಎಂದು ಡಾ.ಬಾಬುರೆಡ್ಡಿ ಕೆಂಗಲಗುತ್ತಿ ತಿಳಿಸಿದರು. ಚಿಕ್ಕಪಡಸಲಗಿ ಆಯುಷ್ಮಾನ ಆರೋಗ್ಯ ಮಂದಿರದ ಸಮುದಾಯ ಆರೋಗ್ಯ ಅಧಿಕಾರಿ ಆನಂದ ತೇಲಸಂಗ, ಆಶಾ ಕಾರ್ಯಕರ್ತೆ ಶ್ರೀಮತಿ ಸಾವಿತ್ರಿ ನ್ಯಾಮಗೌಡ, ಮುಖ್ಯೋಪಾಧ್ಯಾಯ ಬಸವರಾಜ ಜಾಲೋಜಿ, ವಿಶ್ರಾಂತ ಹಿರಿಯ ಶಿಕ್ಷಕ ಬಸವರಾಜ ಅನಂತಪೂರ, ಶಿಕ್ಷಕ ಈರಪ್ಪ ದೇಸಾಯಿ, ಜಿ.ಆರ್.ಜಾಧವ, ಲೋಹಿತ ಮಿಜಿ9,ಕವಿತಾ ಅಂಬಿ, ಸಹನಾ ಕಲ್ಯಾಣಿ, ಪ್ರಮೀಳಾ ತೇಲಸಂಗ ಇತರರಿದ್ದರು.

### ಕಾಯಿಲೆಗೆ ಮಕ್ಕಳೇ ಹೆಚ್ಚು ತುತ್ತು!

ಇಂದಿನ ಯುವ ಮಕ್ಕಳಲ್ಲಿ ದಂತ ಫ್ಲೋರೋಸಿಸ್ ಹೆಚ್ಚಾಗಿ ಕಂಡುಬರುತ್ತಿದೆ. ಸುಲಭವಾಗಿ ಈ ಕಾಯಿಲೆಗೆ ಒಳಗಾಗುತ್ತಿದ್ದಾರೆ. ಹಲ್ಲುಗಳ ಬೆಳವಣಿಗೆ ಸಮಯದಲ್ಲಿ ಅಧಿಕ ಫ್ಲೋರೈಡ್ ಅಂಶವಿರುವ ನೀರು, ಆಹಾರ ಪದಾರ್ಥಗಳನ್ನು ಸೇವಿಸಿ ಮತ್ತು ಟೂತ್‌ಪೇಸ್ಟ್ ಗಳನ್ನು ಬಳಸಿ ಫ್ಲೋರೋಸಿಸ್ ರೋಗ ಅಂಟಿಸಿಕೊಳ್ಳುತ್ತಿರುವುದು ವಿಷಾದನೀಯ. ಮಕ್ಕಳಲ್ಲಿ ಹಾಗೂ ವಯಸ್ಕರಲ್ಲಿ ಈ ರೋಗಬಾಧೆ ಕಂಡುಬರುತ್ತಿದೆ.

# ತೊಗರಿ ಬೆಳೆ ಹಾನಿ ಪ್ರದೇಶಕ್ಕೆ ಡಿ.ಸಿ ಭೇಟಿ:ಬೆಳೆ ವಿಮೆ ಪರಿಹಾರಕ್ಕೆ ಕ್ರಮ :ಜಿಲ್ಲಾಧಿಕಾರಿಗಳು



ಕಲಬುರಗಿ:ನ.28: ಜಿಲ್ಲೆಯಾದ್ಯಂತ ಮಣ್ಣಿನಲ್ಲಿ ತೇವಾಂಶದ ಕೊರತೆ ಹಾಗೂ ಒಣ ಬೇರು ಕೊಳೆ ರೋಗದಿಂದ ತೊಗರಿ ಒಣಗುತ್ತಿರುವ ಹಿನ್ನೆಲೆಯಲ್ಲಿ ಗುರುವಾರ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರು ವಿವಿಧ ಗ್ರಾಮಕ್ಕೆ ತೆರಳಿ ತೊಗರಿ ಬೆಳೆ ಹಾನಿ ಪರಿಶೀಲಿಸಿದರು.ಕಲಬುರಗಿ ತಾಲೂಕಿನ ಪಟ್ಟಣ, ಆಳಂದ ತಾಲೂಕಿನ ಕಡಗಂಚಿ ಹಾಗೂ ಅಫಜಲಪೂರ ತಾಲೂಕಿನ ನೀಲೂರು ಗ್ರಾಮಗಳ ಕೃಷಿ ಕ್ಷೇತ್ರಗಳಿಗೆ ಭೇಟಿ ನೀಡಿ ತೊಗರಿ ಬೆಳೆ ಒಣಗುತ್ತಿರುವ ಬಗ್ಗೆ ವೀಕ್ಷಿಸಿ ರೈತರಿಂದ ಬೆಳೆ ಹಾನಿ ಕುರಿತು ಮಾಹಿತಿ ಪಡೆದುಕೊಂಡರು.ಈ ಸಂದರ್ಭದಲ್ಲಿ ಡಿ.ಸಿ. ಬಿ.ಫೌಜಿಯಾ ತರನ್ನುಮ್ ಮಾತನಾಡಿ, ಬೆಳೆ ವಿಮೆ (ಸ್ಥಳೀಯ ವಿಕೋಪ)ದ ಜಿಲ್ಲಾ ಮಟ್ಟದ ಸಮಿತಿ ಸಭೆ ಬುಧವಾರ ನಡೆಸಿದ್ದು,

ಪ್ರಸಕ್ತ 2024-25ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ತೊಗರಿ, ಉದ್ದು, ಹೆಸರು, ಹತ್ತಿ, ಸೋಯಾಬೀನ್ ಇತರೆ ಮುಂಗಾರು ಬೆಳೆಗಳಿಗೆ ಬೆಳೆ ವಿಮೆ ಮಾಡಿಸಿರುವ ಅಂದಾಜು ಜಿಲ್ಲೆಯ 2.03 ಲಕ್ಷ ರೈತರಿಗೆ 76.94 ಕೋಟಿ ರೂ. ಸ್ಥಳೀಯ ವಿಕೋಪ ಘಟಕದಡಿ ಮಧ್ಯಂತರ ಪರಿಹಾರ ರೈತರ ಖಾತೆಗೆ ಜಮೆ ಮಾಡಲು ಇಫ್ಕೋ-ಟೋಕಿಯೋ ಫಸಲ್ ಬಿಮಾ ಸಂಸ್ಥೆಗೆ ಸೂಚಿಸಲಾಗಿದೆ ಎಂದು ನೆರೆದ ರೈತರಿಗೆ ಅಭಯ ನೀಡಿದರು.ಈ ಸಂದರ್ಭದಲ್ಲಿ ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್ ಮಾತನಾಡಿ, ನೀರಾವರಿ ಸೌಲಭ್ಯವಿರುವ ರೈತರು ಕೂಡಲೇ ಒಂದು ಸಲ ನೀರನ್ನು ತೊಗರಿ ಬೆಳೆಗೆ ಹಾಯಿಸಲು ನೀರಾವರಿ ಸೌಲಭ್ಯ ಇಲ್ಲದಿದ್ದಲ್ಲಿ ಅಂತರ ಬೇಸಾಯ ಕೈಗೊಂಡು ಬಿರುಕುಗಳನ್ನು ಮುಚ್ಚಲು ಕ್ರಮವಹಿಸಬೇಕೆಂದು ರೈತರಿಗೆ ಸಲಹೆ ನೀಡಿದರು. ತೋಟಗಾರಿಕೆ ಉಪನಿರ್ದೇಶಕ ಸಂತೋಷ ಇನಾಂದಾರ, ಕೃಷಿ ಉಪನಿರ್ದೇಶಕ ಸೋಮಶೇಖರ್ ಬಿರಾದಾರ, ಕಲಬುರಗಿ ತಹಶೀಲ್ದಾರ ಆನಂದ ಕೆ., ಆಳಂದ ತಹಶೀಲ್ದಾರ ಅಣ್ಣಾರಾವ ಪಾಟೀಲ ಸೇರಿದಂತೆ ಮತ್ತಿತರು ಇದ್ದರು.

# 6 ಜನ ಜೀವಾವಧಿ ಶಿಕ್ಷೆ ಕೈದಿಗಳ ಅವಧಿ ಪೂರ್ವ ಬಿಡುಗಡೆ



ಕಲಬುರಗಿ: ಕೇಂದ್ರ ಕಾರಾಗೃಹದಲ್ಲಿ ಗುರುವಾರ 6 ಜನ ಜೀವಾವಧಿ ಶಿಕ್ಷಾ ಬಂದಿಗಳನ್ನು ಸನ್ನಡತೆಯ ಆಧಾರದ ಮೇಲೆ ಅವಧಿ ಪೂರ್ವ ಬಿಡುಗಡೆ ಮಾಡಲಾಗಿದೆ ಎಂದು ಕಾರಾಗೃಹದ ಅಧೀಕ್ಷಕಿ ಡಾ. ಅನಿತಾ ಆರ್., ಅವರು ಹೇಳಿದರು.

ಸರ್ಕಾರದ ಆದೇಶದಂತೆ ಹಾಗೂ ಕರ್ನಾಟಕ ರಾಜ್ಯ ಕಾರಾಗೃಹ ಮತ್ತು ಸುಧಾರಣಾ ಸೇವೆಪೊಲೀಸ್‌ಮಹಾನಿರ್ದೇಶಕರ ಆದೇಶದಂತೆ ಕೇಂದ್ರ ಕಾರಾಗೃಹದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿ 14 ವರ್ಷಗಳ ಶಿಕ್ಷೆಯನ್ನು ಅನುಭವಿಸಿದ ಆರು ಜನ ಶಿಕ್ಷಾ ಬಂದಿಗಳನ್ನು ಅವರ ಉತ್ತಮ ಕೆಲಸ ಮತ್ತು ಕಾರಾಗೃಹದಲ್ಲಿ ಅವರ ಉತ್ತಮ ನಡವಳಿಕೆಯನ್ನು ಪರಿಗಣಿಸಿ ಆ ಶಿಕ್ಷಾ ಬಂದಿಗಳ ಕಡತಗಳನ್ನು ಕಾರಾಗೃಹದ ಸ್ಥಾಯಿ ಸಲಹಾ ಮಂಡಳಿಯ ಶಿಫಾರಸ್ಸಿನಂತೆ ಸರ್ಕಾರ ಹಾಗೂ ಪ್ರಧಾನ ಕಚೇರಿ ಬೆಂಗಳೂರಿಗೆ ಕಳುಹಿಸಲಾಗಿದ್ದು, ಅದರಂತೆ ಕರ್ನಾಟಕ ಸರ್ಕಾರದ ಹಾಗೂ ಪೊಲೀಸ್ ಮಹಾನಿರ್ದೇಶಕರು, ಕಾರಾಗೃಹ ಮತ್ತು ಸುಧಾರಣಾ ಸೇವೆ ಅವರ ಶಿಫಾರಸ್ಸುಗಳನೊಳಗೊಂಡು ಐವರು ಪುರುಷ ಕೈದಿಗಳು ಹಾಗೂ ಓರ್ವ ಮಹಿಳಾ ಕೈದಿಯನ್ನು ಬಿಡುಗಡೆ ಮಾಡಲಾಗಿದೆ ಎಂದು ಅವರು ವಿವರಿಸಿದರು.

ಸಾಬಣ್ಣ ತಂದೆ ಮರೆಣ್ಣ ಬನಾರ್, ಖಾಜಾಸಾಬ್ ತಂದೆ ಲಾಲಸಾಬ್, ಶಿವಶಂಕರ್ ಅಲಿಯಾಸ್ ಶಿವಪ್ಪ ತಂದೆ ಬಸವರಾಜ್, ರವಿ ತಂದೆ ಬಾಲಪ್ಪ, ಜೈಭಾರತ್ ತಂದೆ ಬೀರಪ್ಪ, ಅಭೀದಾ ಬೇಗಂ ಗಂಡ ಮೊಹ್ಮದ್ ಖಾಸಿಂ ಅಲಿ ಉಸ್ತಾದ್ ಅವರನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯರು ಮತ್ತು ಬೆಳಗಾವಿಯ ಉತ್ತರ ವಲಯದ ಕಾರಾಗೃಹ ಮತ್ತು ಸುಧಾರಣೆ ಸೇವೆ ಉಪ ಮಹಾನಿರೀಕ್ಷಕರು, ಕಾರಾಗೃಹದ ಅಧೀಕ್ಷಕಿ ಶ್ರೀಮತಿ ಡಾ. ಅನಿತಾ., ಅವರು ಬಂದಿಗಳಿಗೆ ಬಿಡುಗಡೆ ಪ್ರಮಾಣಪತ್ರ ನೀಡಿ, ಮುಂದಿನ ಜೀವನವು ಸುಗಮವಾಗಿ ನಡೆಯಲು ಸಲಹೆಗಳನ್ನು ನೀಡಿ, ಶುಭ ಕೋರಿದರು.

# ರಾಜ್ಯದ ವೈದ್ಯಕೀಯ ಶಿಕ್ಷಣ ಸಚಿವರ ಪ್ರವಾಸ



ಕಲಬುರಗಿ:ರಾಜ್ಯದ ವೈದ್ಯಕೀಯ ಶಿಕ್ಷಣ ಹಾಗೂ ಕೌಶ ಲ್ಯಾಭಿ ವೃದ್ಧಿ, ಉದ್ಯಮಶೀಲತೆ ಮತ್ತು ಜೀ ವನೋ ಪಾಯ ಸಚಿ ವರಾದ ಡಾ. ಶರಣಪ್ರಕಾಶ ಆರ್. ಪಾಟೀಲ ಅವರು ನವೆಂಬರ್ 29 ರಂದು ಶುಕ್ರವಾರ ಸೇಡಂದಲ್ಲಿ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗ ವಹಿಸುವರು. ನಂತರ ಮಧ್ಯಾಹ್ನ 3 ಗಂಟೆಗೆ ಸೇಡಂದಿಂದ ರಸ್ತೆ ಮೂಲಕ ಹೈದ್ರಾಬಾರಗೆ ಪ್ರಯಾಣಿಸುವರು.ನಂತರ ಮರಳಿ ಹೈದ್ರಾಬಾರದಿಂದ ರಸ್ತೆ ಮೂಲಕ ಡಿಸೆಂಬರ್ 1 ರಂದು ಭಾನುವಾರ ಬೆಳಿಗ್ಗೆ ಕಲಬುರಗಿಗೆ ಆಗಮಿಸುವರು. ನಂತರ ಕಲಬುರಗಿಯಲ್ಲಿ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗವಹಿಸಿ ವಾಸ್ತವ್ಯ ಮಾಡುವರು. ಡಿಸೆಂಬರ್ 2 ರಂದು ಸೋಮವಾರ ಬೆಳಿಗ್ಗೆ 10 ಗಂಟೆಗೆ ಸೇಡಂ ಕೊತ್ತಲ ಬಸ'ವೇಶ್ವರ ದೇವ ಸ್ಥಾನದಲ್ಲಿ ಏರ್ಪಡಿಸಲಾದ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿ, ಕಲಬುರಗಿಗೆ ಆಗಮಿಸಿ ವಾಸ್ತವ್ಯ ಮಾಡುವರು. ಡಿಸೆಂಬರ್ 3 ರಂದು ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಕಲಬುರಗಿ ಜಯದೇವ ಆಸ್ಪತ್ರೆಗೆ ಭೇಟಿ ನೀಡುವರು. ಬೆಳಿಗ್ಗೆ 11.30 ಗಂಟೆಗೆ ಎಎಡಿಸಿ (ಒಖಆಅ) ಸ್ಥಾಪನೆಗೆ ಜಿ.ಟಿ.ಟಿ.ಸಿ. (ಉಖಿಖಿಅ) ಮತ್ತು ಗುಲಬರ್ಗಾ ವಿಶ್ವವಿದ್ಯಾಲಯದ ನಡುವೆ ಒಡಂಬಡಿಕೆ ಸಹಿ ಮಾಡುವ ಕಾರ್ಯ ಕ್ರಮದಲ್ಲಿ ಭಾಗ ವ'ಹಿಸುವರು.

# ಭಕ್ತರಿಂದ ಶ್ರೀಗಳ ಪಾದಪೂಜೆ, ಸುವರ್ಣ ಕಿರೀಟ ಧಾರಣೆ ಡಾ. ಶಿವಕುಮಾರ ಸ್ವಾಮೀಜಿ ಜಯಂತಿ ಮಹೋತ್ಸವಕ್ಕೆ ಸಂಭ್ರಮದ ತೆರೆ

ಬೀದರ್: ಇಲ್ಲಿಯ ಸಿದ್ಧಾರೂಢ ಮಠದಲ್ಲಿ ಮಠದ ಪೀಠಾಧಿಪತಿ ಡಾ. ಶಿವಕುಮಾರ ಸ್ವಾಮೀಜಿ ಅವರ ಐದು ದಿನಗಳ 81ನೇ ಜಯಂತಿ ಮಹೋತ್ಸವ ಮಂಗಳವಾರ ಸಂಭ್ರಮದ ಮಧ್ಯೆ ತೆರೆ ಕಂಡಿತು.ಕೊನೆಯ ದಿನ ಭಕ್ತರು ಶಿವಕುಮಾರ ಸ್ವಾಮೀಜಿ ಅವರ ಪಾದ ಪೂಜೆ ಮಾಡಿದರು. ಶ್ರೀಗಳಿಗೆ ಸುವರ್ಣ ಕಿರೀಟ ಧಾರಣೆ ಮಾಡಿಸಲಾಯಿತು. ಇಚ್ಛೆಯ ತ್ಯಾಗ ಮಾಡಿ: ಸಾಧಕ ಆದವನು ಮೊದಲು ಮಾಡಬೇಕಾದ ಕೆಲಸ ಪದಾರ್ಥಗಳ ಇಚ್ಛೆಯ ತ್ಯಾಗ ಎಂದು ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಕಲಬುರಗಿಯ ಮಾತೆ ಲಕ್ಷ್ಮಿದೇವಿ ಹೇಳಿದರು. ಪಂಚೇಂದ್ರೀಯಗಳು ಹಾಗೂ ಮನಸ್ಸು ಅಧೀನದಲ್ಲಿರಬೇಕು. ಶಾಸ್ತ್ರಗಳಲ್ಲಿ ಪರಮ ಶ್ರದ್ಧೆಯಿರಬೇಕು. ಗುರು ವಾಕ್ಯದಲ್ಲಿ ನಂಬಿಕೆ ಇರಬೇಕು ಎಂದು ತಿಳಿಸಿದರು. ಪರಮಾತ್ಮನನ್ನು ಕಾಣಬೇಕೆಂಬ ಅಪೇಕ್ಷೆ ಇದ್ದವನು ಮೊದಲು ಸದ್ಗುರುವಿಗೆ ಶರಣಾಗತನಾಗಬೇಕು. ಜನ್ಮ-ಮರಣ ದುಃಖದಿಂದ ಪಾರು ಮಾಡು ಎಂದು ಮೊರೆ ಹೋದವರ ಮೇಲೆ ಸದ್ಗುರು ಕೃಪೆ ಮಾಡುತ್ತಾನೆ ಎಂದು ಸಾನಿಧ್ಯ ವಹಿಸಿದ್ದ ಡಾ. ಶಿವಕುಮಾರ ಸ್ವಾಮೀಜಿ ಹೇಳಿದರು.ನಂಬಿದವರ ಬೆನ್ನಿಗೆ ದೇವರು ಇರುತ್ತಾನೆ. ಮನುಷ್ಯ ಮಾಡಿದ ಧರ್ಮವೇ ಜತೆಗೆ ಬರುತ್ತದೆ. ಅರ್ಥ ಬಿಟ್ಟು ಅಧರ್ಮಿಗಳಾದರೆ ದುಃಖ ತಪ್ಪಿದ್ದಲ್ಲ ಎಂದು



ನುಡಿದರು.ಮನಸ್ಸು ಶಾಂತವಾಗಿದ್ದರೆ ಧ್ಯಾನ ಮಾಡಬೇಕು. ಶಕ್ತಿಯಿದ್ದರೆ ಗುರು ಸೇವೆ ಮಾಡಬೇಕು. ಧನವಿದ್ದರೆ ದಾನ ಮಾಡಿ ಗುಣ್ಯ ಗಳಿಸಬೇಕು ಎಂದು ತಿಳಿಸಿದರು.ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಮಾತನಾಡಿದರು. ಗೋಸಾಯಿ ಮಠದ ಸ್ವಾಮೀಜಿ, ನಾಗಪುರದ ಮನಿಷಾತಾಯಿ, ಜಡಿಸಿದ್ದೇಶ್ವರ ಸ್ವಾಮೀಜಿ, ಪರಮಾನಂದ ಸ್ವಾಮೀಜಿ, ಶಂಕರಾನಂದ ಸ್ವಾಮೀಜಿ, ಡಾ. ಸ್ವರೂಪಾನಂದ ಸ್ವಾಮೀಜಿ, ಪೂರ್ಣಾನಂದ ಸ್ವಾಮೀಜಿ, ಗಣೇಶಾನಂದ ಮಹಾರಾಜ್, ಅದ್ವೈತಾನಂದ ಸ್ವಾಮೀಜಿ, ಸದ್ರೂಪಾನಂದ ಸ್ವಾಮೀಜಿ, ಮಾತೆ ಸಿದ್ದೇಶ್ವರಿ, ಮಾತೆ ಸಂಗೀತಾದೇವಿ, ಶ್ರೀದೇವಿ ಕರಡ್ಯಾಳ, ಲಲಿತಾಬಾಯಿ ಶೆಟಕಾರ್, ಮಾತೆ ಆನಂದಮಯಿ, ಮಾತೆ ಅಮೃತಾನಂದ, ಸಾಧಕರಾದ ಗೋಪಾಲ ಶಾಸ್ತ್ರಿ, ಸತೀಶ, ವಿನಾಯಕ, ಹುಬ್ಬಳ್ಳಿಯ ಸಿದ್ದು, ಪ್ರಭು, ಚಿದಂಬರ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾದ ಬಿ.ಜಿ. ಶೆಟಕಾರ್, ಪ್ರಭುಶೆಟ್ಟಿ ಮುದ್ದಾ, ಶಿವಶರಣಪ್ಪ ಸಾವಳಗಿ, ಶರಣಪ್ಪ ತಿರ್ಲಾಪುರೆ, ಉದಯಭಾನು ಹಲವಾಯಿ, ಈಶ್ವರಗೌಡ ಕಮಡಳ್ಳಿ, ಮಡಿವಾಳಪ್ಪ ಗಂಗಶೆಟ್ಟಿ, ಸುಭಾಷ್ ಉಪ್ಪೆ, ಭಾರತಿಬಾಯಿ ಕಣಜಿ, ಆಡಳಿತಾಧಿಕಾರಿ ಡಾ. ಹಾವಗಿರಾವ್ ಮೈಲಾರೆ, ಕಲ್ಯಾಣರಾವ್ ಬುಜುರ್ಕೆ, ಸಹಜಾನಂದ ಕಂದಗೂಳ್, ಸಿದ್ಧಾರೂಢ ಕಂದಗೂಳ್, ವಿರೂಪಾಕ್ಷ ಗಾದಗಿ, ಶಶಿಧರ ಹೊಸಳ್ಳಿ, ಮಲ್ಲಿಕಾರ್ಜುನ ಜಾಬಶೆಟ್ಟಿ, ಡಾ. ಆನಂದ ಜಾಬಶೆಟ್ಟಿ, ಪ್ರಭು ಬೆಣ್ಣೆ, ಡಾ. ಚಂದ್ರಪ್ಪ ಭತಮುರ್ಗೆ, ಲಕ್ಷ್ಮಣ ಎಂ ಪೂಜಾರಿ, ಬಸವರಾಜ ಮ್ಯಾಗೆರಿ, ನಾಗಪ್ಪ ಜಾನಕನೋರ, ಡಾ. ಚಂದ್ರಕಾಂತ ಹಳ್ಳಿ ಡಾ. ವಿಜಯಕುಮಾರ ಬಿರಾದಾರ ಇದ್ದರು. ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ, ಮಹಾರಾಷ್ಟ್ರ ಸೇರಿದಂತೆ ವಿವಿಧೆಡೆಯ ಅಪಾರ ಭಕ್ತರು ಪಾಲ್ಗೊಂಡಿದ್ದರು.



# ಡಾ.ಎಂ.ಎಂ.ಕಲಬುರ್ಗಿ ಕೊಡುಗೆ ಅವಿಸ್ಮರಣೀಯ

ಕಲಬುರಗಿ: ಡಾ.ಎಂ.ಎಂ.ಕಲಬುರ್ಗಿ ಅವರು ಈ ನಾಡು ಕಂಡ ಶ್ರೇಷ್ಟ ಚಿಂತಕರಲ್ಲಿ ಪ್ರಮುಖರಾಗಿದ್ದಾರೆ. ಅವರು ತಮಗೆ ಹೇಳಬೇಕೆನಿಸಿದ ವಿಷಯವನ್ನು ಯಾವುದೇ ಮುಲಾಜಿಲ್ಲದೇ ಹೇಳುವ ಎದೆಗಾರಿಕೆ ಹೊಂದಿದ್ದರು. ತಮ್ಮ ಇಡೀ ಜೀವನದುದ್ದಕ್ಕೂ ಸತ್ಯಕ್ಕಾಗಿ, ಮೌಢ್ಯತೆ, ಅಂಧಶೃದ್ಧೆ, ಕಂದಾಚಾರದಂತಹ ಅನಿಷ್ಟಗಳ ವಿರುದ್ದ ಹೋರಾಡುವ ಮೂಲಕ, ವೈಚಾರಿಕತೆಯ ಪ್ರಖರ ಜ್ಯೋತಿಯಾಗಿ, ನಾಡು, ನುಡಿ, ಸಂಸ್ಕೃತಿ, ಶರಣ ಸಾಹಿತ್ಯಕ್ಕೆ ಅವಿಸ್ಮರಣೀಯವಾದ ಕೊಡುಗೆಯನ್ನು ನೀಡಿದ್ದಾರೆಂದು ಉಪನ್ಯಾಸಕ, ಶರಣ ಚಿಂತಕ ಎಚ್.ಬಿ.ಪಾಟೀಲ ಅಭಿಪ್ರಾಯಪಟ್ಟರು. ನಗರದ ಆಳಂದ ರಸ್ತೆಯ ಶಿವ ನಗರದಲ್ಲಿರುವ 'ಜ್ಞಾನ ಚಿಗುರು ಟ್ಯುಟೋರಿಯಲ್ಸ್'ನಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಗುರುವಾರ ಸಂಜೆ ಜರುಗಿದ 'ಡಾ. ಎಂ.ಎಂ. ಕಲಬುರ್ಗಿಯವರ 86ನೇ ಜನ್ಮದಿನಾಚರಣೆ'ಯಲ್ಲಿ ಭಾವಚಿತ್ರಕ್ಕೆ ಪುಷ್ಪ ಗೌರವ ಸಲ್ಲಿಸಿ ಮಾತನಾಡುತ್ತಿದ್ದರು. ಡಾ. ಕಲಬುರ್ಗಿ ಅವರು ಅಧ್ಯಾಪಕರಾಗಿ, ಕುಲಪತಿಗಳಾಗಿ, ಸಂಶೋಧಕರಾಗಿ, ಸಂಪಾದಕರಾಗಿ ಸೇವೆ ಸಲ್ಲಿಸಿದಾರೆ. 20ಕ್ಕೂ ಹೆಚ್ಚಿನ ಕೃತಿಗಳನ್ನು ರಚಿಸಿ, ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ವೈಜ್ಞಾನಿಕ ಸಂಶೋಧನೆ, ಸಂಪಾದನೆಗೆ ಹೆಸರಾದವರು. ಸದಾ ಕ್ರೀಯಾಶೀಲ ವ್ಯಕ್ತಿತ್ವವನ್ನು ಹೊಂದಿದ್ದರು. ಎಲ್ಲರಿಗೂ ಒಗ್ಗದ ಸಂಶೋ ಧನೆಯನ್ನು ಕಲಬುರ್ಗಿಯವರು ಒಗ್ಗಿಸಿಕೊಂಡಿರುವದೇ ಅವರ ವಿಶೇಷತೆಯಾಗಿದೆ. ಇಂತಹ ಮಹಾನ ವ್ಯಕ್ತಿಯನ್ನು ಹತ್ಯೆ ಮಾಡಿರುವುದು ತುಂಬಾ ನೋವಿನ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಸಮಾಜ ಸೇವಕ ಶಿವಯೋಗೆಪ್ಪಾ ಎಸ್.ಬಿರಾದಾರ, ಶಿಕ್ಷಕಿ ಚಂಪಾಕಲಾ ನೆಲ್ಲೂರೆ, ಪ್ರಮುಖರಾದ ಸ್ವರೂಪ್, ಪವಿತ್ರಾ, ನೀಲಮ್ಮಾ, ರಾಧಿಕಾ, ಭಾಗ್ಯಲಕ್ಷ್ಮೀ, ಶಿಲ್ಪಾ, ಆನಂದ, ಸಂಗಮೇಶ್ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಸಮಾನ ಹಕ್ಕು ನೀಡಿದ ಸಂವಿಧಾನ



ಬೀದರ್: ಸಂವಿಧಾನ ದೇಶದ ಪ್ರತಿ ಪ್ರಜೆಗೂ ಸಮಾನ ಹಕ್ಕು ನೀಡಿದೆ ಎಂದು ಬೀದರ್ ಅಂಚೆ ಅಧೀಕ್ಷಕ ವಿ.ಎಲ್. ಚಿತಕೋಟ ಹೇಳಿದರು. ನಗರದ ಪ್ರಧಾನ ಅಂಚೆ ಕಚೇರಿಯಲ್ಲಿ ಮಂಗಳವಾರ ನಡೆದ ಸಂವಿಧಾನ ದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ವಿವಿಧ ದೇಶಗಳ ಸಂವಿಧಾನಗಳ ಅಧ್ಯಯನದ ನಂತರವೇ ಭಾರತದ ಸಂವಿಧಾನ ರಚಿಸಲಾಗಿದೆ. ಸಂವಿಧಾನದ ಕರಡು ತಯಾರಿಸುವಲ್ಲಿ ಡಾ. ಅಂಬೇಡ್ಕರ್ ಅವರ ಪಾತ್ರ ಪ್ರಮುಖವಾಗಿದೆ ಎಂದರು. ಪ್ರಸ್ತುತ ಮಹಿಳೆಯರಿಗೆ ದೊರಕುತ್ತಿರುವ ಸ್ಥಾನಮಾನ ಡಾ. ಅಂಬೇಡ್ಕರ್ ಅವರ ಕೊಡುಗೆ. ಅವರು ಕೊಟ್ಟ ಸಂವಿಧಾನಕ್ಕೆ ಬದ್ಧರಾಗಿ ನಡೆಯುವುದು ನಮ್ಮೆಲ್ಲರ ಕರ್ತವ್ಯ ಎಂದು ಕಚೇರಿಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಮಂಗಲಾ ಭಾಗವತ್ ಹೇಳಿದರು. ಸಂವಿಧಾನದ ಬಗ್ಗೆ ಎಲ್ಲರಿಗೂ ಸದಾ ಗೌರವ ಇರಬೇಕು ಎಂದು ಅಧ್ಯಕ್ಷತೆ ವಹಿಸಿದ್ದ ರಾಜೇಂದ್ರ ವಗ್ಗೆ ನುಡಿದರು. ಪದೋನ್ನತಿ ಹೊಂದಿದ ಇಲಾಖೆಯ ದತ್ತಾತ್ರಿ ರೆಡ್ಡಿ, ವೆಂಕ ಟೇಶ್ ಎಸ್, ರಾಜು ಗೌಳಿ, ಅರುಣ ಪಾಟೀಲ, ಸಂಗಮೇಶ, ವಿಶಾಲ್, ಶಿವಕುಮಾರ, ಬಸವ ರಾಜ, ರಮೇಶ್, ಸಚಿನ್ ಅವರನ್ನು ಸನ್ಮಾನಿಸಲಾಯಿತು. ಹರೀಶಕ 'ಮಾರ ನಿರೂಪಿಸಿದರು. ಸುಧಾ ಕರ ಎಲ್.ಬಿ. ಸ್ವಾಗತಿಸಿದರು. ಮಹೇಶ ಇಬಿಬ್ದಾರ್ ವಂದಿಸಿದರು.

# ಮಹಾತ್ಮ ಜ್ಯೋತಿಬಾ ಫುಲೆಯವರ ಕೊಡುಗೆ ಅನನ್ಯ

ಕಲಬುರಗಿ: ಮಹಿಳಾ ಶಿಕ್ಷಣಕ್ಕೆ ಪ್ರಯತ್ನ, ಸ್ತ್ರೀ-ಪುರುಷರ ನಡುವಿನ ಅಸಮಾನತೆ ನಿರ್ಮೂಲನೆ, ಜಾತಿ, ಧರ್ಮದ ಹೆಸರಿನ ಮೇಲೆ ನಡೆಯುತ್ತಿದ್ದ ವ್ಯಾಪಕವಾದ ಶೋಷಣೆ, ಮೌಢ್ಯತೆ, ಅಂಧಶೃದ್ಧೆ, ಅಸ್ಪೃಶ್ಯತೆ ಹೋಗಲಾಡಿಸಲು ನಿರಂತರವಾಗಿ ಇಡೀ ತಮ್ಮ ಜೀವನದುದ್ದಕ್ಕೂ ಹೋರಾಟ ಮಾಡಿದ ಮಹಾತ್ಮ ಜ್ಯೋತಿಬಾ ಫುಲೆಯವರು ಶ್ರೇಷ್ಠ ಸಮಜ ಸುಧಾರಕರಾಗಿದ್ದಾರೆ. ಅವರು ನೀಡಿರುವ ಬಹುಮುಖ ಕೊಡುಗೆ ಅನನ್ಯವಾಗಿದೆ ಎಂದು ಉಪನ್ಯಾಸಕ, ಚಿಂತಕ ಎಚ್.ಬಿ.ಪಾಟೀಲ ಅಭಿಮತಪಟ್ಟರು. ಯಡ್ರಾಮಿ ಪಟ್ಟಣದ ಕದಂಬ ಪದವಿ ಪೂರ್ವ ಕಾಲೇಜಿನಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಗುರುವಾರ ಜರುಗಿದ 'ಮಹಾತ್ಮ ಜ್ಯೋತಿಬಾ ಫುಲೆಯವರ



134ನೇ ಸ್ಮರಣೋತ್ಸವ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, 'ಸತ್ಯ ಶೋಧಕ ಸಮಾಜ'ದ ಮೂಲಕ ಬಾಲ್ಯ ವಿವಾಹ, ವಿಧವೆಯರ ಶೋಷಣೆ ವಿರುದ್ಧ ಸಂಘಟಿತ ಹೋರಾಟ ಮಾಡಿದರು. ಶೋಷಿತ ಜನಾಂಗವು ಅನುಭವಿಸುತ್ತಿದ್ದ ಮೂಕ ರೋಧನೆಗೆ ಅವರು ಧ್ವನಿಯಾದರು ಎಂದರು. ಕಾಲೇಜಿನ ಪ್ರಾಚಾರ್ಯ ದೇವಿಂದ್ರ ಬಿ.ಗುಡೂರ್ ಮಾತನಾಡಿ, ಬ್ರಿಟಿಷರ ಶೋಷಣೆಯಿಂದ ಸಾಮಾಜಿಕವಾಗಿ ಸಾಕಷ್ಟು ತೊಂದರೆಯನ್ನು ಅನುಭವಿಸುತ್ತಿದ್ದ ಸಂದರ್ಭವನ್ನು ಬಾಲ್ಯದಿಂದಲೇ ಕಂಡ ಫುಲೆಯವರು, ಮುಂದೆ ದೊಡ್ಡ ಪ್ರಮಾಣದ ಹೋರಾಟವನ್ನು ಮಾಡಿ ಶ್ರೇಷ್ಟ ಸಮಾಜ ಸುಧಾರಕರಾದರು. ಇಂತಹ ಮಹನೀಯರ ಬಗ್ಗೆ ವಿದ್ಯಾರ್ಥಿ ದೆಸೆಯಿಂದಲೇ ತಿಳಿದುಕೊಂಡು ಮುಂದೆ ನೀವು ಕೂಡಾ ರಾಷ್ಟದ ಅಮೂಲ್ಯ ಸಂಪತ್ತಾಗುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು.ಕಾರ್ಯಕ್ರಮದಲಿ ಕಾಲೇಜಿನ ಉಪ ನ್ಯಾಸಕರಾದ ಸಿದ್ರಾಮಯ್ಯ ಹಇರೇಮಠ, ಇಬ್ರಾಹಿಂ ವಸ್ತಾರಿ, ಭಾಗ್ಯಶ್ರೀ ಗೌಡಗೇರಿ, ಅಬ್ದುಲ್ ವಾಬ್, ಮಹಾನಂದ ಹಿರೇಮಠ, ಪ್ರತಿಭಾ ಬಿ.ಜಿ., ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಉಜ್ವಲವಾಗಿ ಬೆಳಗಲಿ ದಾಂಪತ್ಯ ದೀವಿಗೆ

■ ಉದಯರಶ್ಮಿ ದಿನಪತ್ರಿಕೆ

ದಾಂಪತ್ಯ ಎಂಬುದು ಕೇವಲ ಹೂವಿನ ಹಾಸಿಗೆಯಲ್ಲ.. ಸಮಾಜ ಒಪ್ಪಿದ ರೀತಿಯಲ್ಲಿ ಒಂದು ಜೋಡಿ ಗಂಡು ಹೆಣ್ಣು ಮದುವೆ ಎಂಬ ಸುಮಧುರ ಬಂಧದಲ್ಲಿ ಒಂದಾಗಿ ಬದುಕಿನಲ್ಲಿ ಮುಂದೆ ಸಾಗುತ್ತಾರೆ. ಸುಖದಲ್ಲಿ ದುಃಖದಲ್ಲಿ ಜೊತೆಯಾಗಿ ಸಾಗುವ ದಂಪತಿಗಳ ಬದುಕಿನಲ್ಲಿ ಸಾಕಷ್ಟು ತೊಂದರೆಗಳು, ನೋವುಗಳು, ಆರ್ಥಿಕ ಪಡಿಪಾಟಲುಗಳು, ಸಂತಸ, ದುಃಖ ಹೀಗೆ ಹತ್ತು ಹಲವಾರು ಕಂತೆಗಳು ಇರುತ್ತವೆ. ಜೀವನ ನಮ್ಮೆಡೆಗೆ ಎಸೆಯುವ ಪ್ರತಿ ಸವಾಲಿಗೂ, ಪ್ರತಿ ಸಂಕಷ್ಟದ ಗಳಿಗೆಗೂ, ಪ್ರತಿಯೊಂದು ಒತ್ತಡಭರಿತ ತೊಂದರೆಗಳನ್ನು ದಂಪತಿಗಳು ಎದುರಿಸಲೇಬೇಕಾಗುತ್ತದೆ.

ಆದರೆ ಜೀವನದ ಎಲ್ಲಾ ಸುಖ ದುಃಖಗಳಲ್ಲಿ ನಿಮಗೆ ಹೆಗಲು ಕೊಟ್ಟು ಎಲ್ಲವನ್ನು ನೀಗಿಸಿಕೊಂಡು ಹೋಗುವ ಸಂಗಾತಿ ಇದ್ದರೆ ಬದುಕು ಭಾರವೆನಿಸುವುದಿಲ್ಲ.ಒಬ್ಬರಿಗೊಬ್ಬರು ಜೊತೆಯಾಗಿ



ಬದುಕಿನ ಎಲ್ಲ ಬವಣೆಗಳನ್ನು ನೀಗಿಕೊಂಡು ಒಬ್ಬರಿಗೊಬ್ಬರು ಆಸರೆಯಾಗುತ್ತಾರೆ, ಚೈತನ್ಯ ಶಕ್ತಿಯಾಗುತ್ತಾರೆ.

ಒಬ್ಬರಿನ್ನೊಬ್ಬರ ಭಾರವನ್ನು ಹೊರುವ ಮೂಲಕ ಪ್ರೀತಿಯ ನವ ಪರಿಭಾಷೆಯನ್ನು ಬರೆಯುತ್ತಾರೆ. ಹಲವಾರು ಬಾರಿ ಸೋತರೂ ಜೊತೆಯಾಗಿ ಗೆಲ್ಲುತ್ತಾರೆ. ಒಬ್ಬರಿಗೊಬ್ಬರು ಪರಸ್ಪರ ಸಹಾಯುವಾಗಿ ಬದುಕುತ್ತಾರೆ. ಜೀವನದ ಕಠಿಣ ಸವಾಲುಗಳನ್ನು ಎದುರಿಸುವಾಗ ಸರಿಯಾದ ವ್ಯಕ್ತಿ ಜೊತೆಗಿದ್ದರೆ ಅದರ



ವಿಶೇಷತೆಯೇ ಬೇರೆ.

ಮದುವೆಗೆ ಮುನ್ನ ಪರಸ್ಪರರ ಆಸೆ ಆಕಾಂಕ್ಷೆಗಳ ಕುರಿತು ಮಾತ್ರ ಮಾತನಾಡುವ, ಬಣ್ಣ ಬಣ್ಣದ ಕನಸುಗಳನ್ನು ಹೆಣೆಯುವ, ಪ್ರೀತಿ ಪ್ರೇಮದ ಮಧುರ ಸಲ್ಲಾಪದ, ಪ್ರಣಯದ ಬೆಚ್ಚನೆಯ ಭಾವಗಳು ತಂದೊಡ್ಡುವ ಮಧುರಾನುಭೂತಿಗೆ ಕೊನೆಯೇ ಇರುವುದಿಲ್ಲ.

ಒಂದೊಮ್ಮೆ ಪಾಣಿಗ್ರಹಣವಾಗಿ ಮಧುಚಂದ್ರವನ್ನು ಪೂರೈಸಿ ಮನೆಗೆ ಮರಳುವ ದಂಪತಿಗಳಿಗೆ ಬದುಕು ತನ್ನ ಮತ್ತೊಂದು ಮಗ್ಗುಲನ್ನು ತೋರುತ್ತದೆ. ಅದುವರೆಗೂ ದೂರದಿಂದಲೇ ಪರಸ್ಪರರ ಕುರಿತು ಅರಿತಿದ್ದೇವೆ ಎಂದುಕೊಂಡವರು ಇದೀಗ ಅವರೊಂದಿಗೆ ಬದುಕುವಾಗ ನಿಜವಾದ ಸತ್ವ ಪರೀಕ್ಷೆ ಆರಂಭವಾಗುತ್ತದೆ.

ಪುರುಷನಾದರೆ ಪತ್ನಿಯ ಯೋಗಕ್ಷೇಮವನ್ನು, ಆರ್ಥಿಕ ಅವಶ್ಯಕತೆಗಳನ್ನು ನೋಡಿಕೊಳ್ಳುವುದು ಆತನ ಕರ್ತವ್ಯ. ಕೆಲವೊಮ್ಮೆ ತನ್ನ ಪಾಲಕರ ಮತ್ತು ಒಡಹುಟ್ಟಿದವರ ನಿರ್ಲಕ್ಷ್ಯ,ಅಸಮಾಧಾನದ ಬಿಸಿ ಪತ್ನಿಗೆ ತಾಕದಂತೆ ನೋಡಿಕೊಳ್ಳುವ ಜವಾಬ್ದಾರಿ ಕೂಡ ಆತನದ್ದೆ ಆಗಿರುತ್ತದೆ.

ತಾನು ಹುಟ್ಟಿ ಬೆಳೆದ ಪರಿಸರ, ತಂದೆ-ತಾಯಿ, ಬಂಧು

## 'ವೀಣಾಂತರಂಗ

ಬಳಗವನ್ನು ಬಿಟ್ಟು ಬಂದಿರುವ ಆಕೆಯನ್ನು ಎಲ್ಲ ರೀತಿಯಿಂದ ರಕ್ಷಿಸುವುದು ಪತಿಯ ಮೊದಲ ಆದ್ಯತೆಯಾಗಿರಬೇಕು. ಬೇರೆಯವರು ತನ್ನ ಪತ್ನಿಯನ್ನು ಹೀಯಾಳಿಸುವ, ಅವಮಾನಿಸುವ ಮೂಲಕ ಮನೆಯ ವಾತಾವರಣ ಬಿಗಡಾಯಿಸದಂತೆ ನೋಡಿಕೊಳ್ಳುವುದು ಪುರುಷನ ಜವಾಬ್ದಾರಿ ಆಗಿರುತ್ತದೆ.

ದಾಂಪತ್ಯ ಎಂಬ ಪವಿತ್ರ ಬಂಧನದಲ್ಲಿ ಬಂಧಿಯಾದ ಪ್ರತಿಯೊಬ್ಬ ಪುರುಷನು ತನ್ನ ಪತ್ನಿಯನ್ನು ಮೊದಲ ಆದ್ಯತೆಯನ್ನಾಗಿಸಿಕೊಳ್ಳಬೇಕು. ಆಕೆಯೊಂದಿಗೆ ಜೀವಮಾನವಿಡಿ ಜೊತೆಯಾಗಿ ಕಳೆಯುವ ಬದ್ಧತೆಗೆ ಒಳಗಾಗುವ ಪುರುಷ ಕೇವಲ ಆಕೆಯನ್ನು ಪ್ರೀತಿಸುವ ಮತ್ತು ಇಚ್ಛೆಯನ್ನು ಪೂರೈಸಿಕೊಳ್ಳುವ

ಸಾಧನವೆಂಬಂತೆ ಪರಿಗಣಿಸದೆ ಆಕೆಯ ಭಾವನಾತ್ಮಕ ಮತ್ತು ಮಾನಸಿಕ ಬೆಂಬಲ ನೀಡಬೇಕು.

ತನ್ನ ಪತ್ನಿ ಮತ್ತು ತನ್ನ ಕುಟುಂಬದ ನಡುವೆ ಸಿಕ್ಕು ಬೀಳುವ ಬಹಳಷ್ಟು ಪುರುಷರು ಇವರಿಬ್ಬರನ್ನು ಬೇರೆ ಎಂದು ಪರಿಗಣಿಸದಂತಹ ವಾತಾವರಣವನ್ನು ಕುಟುಂಬದಲ್ಲಿ ಸೃಷ್ಟಿಸಬೇಕು. ಪತಿಯಾಗಿ ತಮ್ಮ ಪತ್ನಿಯ ಅವಶ್ಯಕತೆಗಳನ್ನು ಪೂರೈಸುವುದು ತನ್ನ ಕುಟುಂಬಕ್ಕೆ ತಾನೆಸಗುವ ದ್ರೋಹ ಎಂದು ಭಾವಿಸದೆ ಆರೋಗ್ಯಕರ ಗಡಿಗಳನ್ನು ಹಾಕಿಕೊಳ್ಳುವ ಮೂಲಕ ಪರಸ್ಪರ ಗೌರವ ಮತ್ತು ಸಾಮರಸ್ಯವನ್ನು ನಿಶ್ಚಲತೆ ಮತ್ತು ಪ್ರೀತಿ ಎರಡಕ್ಕೂ ಧಕ್ಕೆಯಾಗದಂತೆ ಉಳಿಸಿಕೊಳ್ಳುವುದು ಒಳ್ಳೆಯದು..

ಮೊದಮೊದಲು ತನ್ನ ಮೇಲಿನ ನಿರ್ಲಕ್ಷವನ್ನು ಸಹಿಸುವ ಪತ್ನಿ ಮುಂದಿನ ದಿನಮಾನಗಳಲ್ಲಿ ಪತಿಯ ಮೇಲಿನ ನಂಬಿಕೆ,



ಆತ್ಮೀಯತೆ ಮತ್ತು ಗೌರವವನ್ನು ಕಳೆದುಕೊಳ್ಳುತ್ತಾಳೆ

ಸತತವಾಗಿ ಹೀಯಾಳಿಸುವುದು, ಎಲ್ಲ ವಿಷಯಗಳಲ್ಲೂ ಮೂಗು ತೂರಿಸುವುದು, ಹಸ್ತಕ್ಷೇಪ ಮಾಡುವುದರ ಮೂಲಕ (ಆಕೆ ನಿಮ್ಮವಳೆ ಆದಾಗ್ಯೂ ಕೂಡ) ಪತ್ನಿಯ ವೈಯುಕ್ತಿಕ ಸ್ವಾತಂತ್ರ್ಯವನ್ನು ಕಳೆಯಬಾರದು. ಪತಿಗೃಹ ಆಕೆಯ ಪಾಲಿಗೆ ಒಂದು ಪವಿತ್ರ ನಿವಾಸ ಎಂಬಂತೆ ಭಾಸವಾಗಬೇಕು. ಪತಿಯ ಸಾಂಗತ್ಯದಲ್ಲಿ ಆಕೆ ಸುರಕ್ಷತೆಯನ್ನು, ಗೌರವ ಮತ್ತು ಚೇತೋಹಾರಿ



ಸಂಬಂಧವನ್ನು ಕಂಡುಕೊಳ್ಳಬೇಕು. ಅನವಶ್ಯಕ ಸಂಘರ್ಷಗಳು ವಾದ ವಿವಾದಗಳು ದಂಪತಿಗಳ ನಡುವಿನ ಸಂಬಂಧದಲ್ಲಿ ಬಿರುಕನ್ನುಂಟು ಮಾಡುತ್ತವೆ ಎಂಬುದು ನೆನಪಿನಲ್ಲಿರಬೇಕು.

ದಂಪತಿಗಳು ಕೈಗೊಳ್ಳುವ ಎಲ್ಲಾ ನಿರ್ಧಾರಗಳು ತಮ್ಮ ಕುಟುಂಬದ ಒಳಿತಿಗಾಗಿ ಎಂಬುದನ್ನು ಮನೆಯುವರು ಮತ್ತು ಸಂಗಾತಿಗೆ ಮನಗಾಣಿಸಬೇಕು.

ಪತ್ನಿಯಾಗಿ ಬರುವ ಪ್ರತಿಯೊಬ್ಬ ಹೆಣ್ಣು ಮಕ್ಕಳು ಗಂಡನನ್ನು ಕೇವಲ ತನಗಾಗಿ ಮೀಸಲು ಎಂಬಂತೆ ಭಾವಿಸಬಾರದು.ಮನೆಯ ಎಲ್ಲಾ ಸದಸ್ಯರೊಂದಿಗೆ ಒಳ್ಳೆಯ ಭಾಂದವ್ಯವನ್ನು ಕಾಯ್ದುಕೊಳ್ಳುವ ಮೂಲಕ ಪತಿಯ ಪ್ರೀತಿ ವಿಶ್ವಾಸ ನಂಬಿಕೆಯನ್ನು ಗಳಿಸಿ ಆ ಮನೆಯವರಲ್ಲಿ ಒಂದಾಗಿ ಬೆರೆಯಬೇಕು.

ತನ್ನ ತವರಿನ ಸ್ಥಾನಮಾನ, ಆಸ್ತಿ-ಅಂತಸ್ತುಗಳನ್ನು ಗಂಡನ ಮನೆಯ ಜೊತೆ ಹೋಲಿಸದೆ ಪ್ರೀತಿ ವಿಶ್ವಾಸದಿಂದ ಬದುಕಬೇಕು.

ಏಟಿಗೆ ಏಟು, ಮಾತಿಗೆ ಮಾತು ಎಂಬಂತೆ ಕಡ್ಡಿ ತುಂಡು ಮಾಡಿದಂತಹ ವರ್ತನೆ ಸಲ್ಲದು. ಈ ಹಿಂದಿನಂತೆ ಯಾರೂ ಕೂಡ ಮನೆಗೆ ಬರುವ ಸೊಸೆಯನ್ನು ನಡೆಸಿಕೊಳ್ಳುವುದಿಲ್ಲವಾದ ಕಾರಣ

ಆಕೆಯೂ ಕೂಡ ತನಗೆ ದೊರೆಯುವ ಪತಿಯ ಮನೆಯ ಎಲ್ಲಾ ಗೌರವಾದರಗಳಿಗೆ ತಕ್ಕಂತೆ ವರ್ತಿಸಬೇಕು.

ಅಂತಿಮವಾಗಿ ದಾಂಪತ್ಯ ಎಂಬ ದೀವಿಗೆಯನ್ನು ಚಿರಕಾಲ ಬೆಳಗಲು ದಂಪತಿಗಳಿಬ್ಬರು ಅದಕ್ಕೆ ಪ್ರೀತಿಯ ಎಣ್ಣೆ, ನಂಬಿಕೆಯ ಬತ್ತಿ ಮತ್ತು ಎಂದೂ ಕೊನೆಯಾಗದ ವಿಶ್ವಾಸ ಎಂಬ ನಂದದ ದೀಪವನ್ನು ಹಚ್ಚಿ ಕಾಯ್ದುಕೊಳ್ಳುವ ಮೂಲಕ ಮಕ್ಕಳೆಂಬ ಮೌಲ್ಯಗಳ ಬೆಳಕಿನ ಪ್ರಭೆಯನ್ನು ಸಮಾಜಮುಖಿಯಾಗಿ ಪಸರಿಸಬೇಕು.

ಲೇಖನ
- ವೀಣಾ ಹೇಮಂತ್ ಗೌಡ ಪಾಟೀಲ್
ಮುಂಡರಗಿ, ಗದಗ ಜಿಲ್ಲೆ



